## ಸಾಹಿತ್ಯ ಸಿಂಚನ

### ತಾಳ್ಮೆ

ತಾಳ್ಮೆ ಎಂದರೆ ಸೋಲು ಅಲ್ಲ,
ಗೆಲುವಿನ ದಾರಿಯ ಮೊದಲ ಹೆಜ್ಜೆ.
ಕತ್ತಲಿನ ನಂತರ ಬೆಳಕು ಬರುವಂತೆ,
ಕಷ್ಟದ ಬಳಿಕ ಸುಖವೂ ಬರುತ್ತದೆ.

ಗಾಳಿ ಬಿರುಗಾಳಿಯಾದರೂ,
ಬೇರು ಬಿಟ್ಟ ಮರ ನಿಂತೇ ಇರುವುದು.
ಹಾಗೆಯೇ ತಾಳ್ಮೆಯ ಮನಸ್ಸು,
ಯಾವ ಸಂಕಷ್ಟಕ್ಕೂ ಕುಗ್ಗುವುದಿಲ್ಲ.

ಆತುರದ ನಿರ್ಧಾರ ತಪ್ಪು ತರಬಹುದು,
ತಾಳ್ಮೆಯ ಚಿಂತನೆ ಜಯ ತರುವುದು.
ಮೌನದೊಳಗಿರುವ ಶಕ್ತಿ ಅಪಾರ,
ಸಹನೆಯಲ್ಲಿದೆ ಬದುಕಿನ ಸಾರ.

ಬೆವರಿನ ಪ್ರತಿಯೊಂದು ಹನಿ,
ಭವಿಷ್ಯದ ಫಲದ ಬೀಜವಾಗುವುದು.
ಕಾಯುವ ಪ್ರತಿಕ್ಷಣವೂ ವ್ಯರ್ಥವಲ್ಲ,
ಅದು ಯಶಸ್ಸಿನ ಪಾಠವಾಗುವುದು.

ಸೂರ್ಯನು ಉದಯಿಸಲು ಸಮಯ ಬೇಕು,
ಹೂವು ಅರಳಲು ಋತು ಬೇಕು.
ಹಣ್ಣು ಹಣ್ಣಾಗಲು ದಿನಗಳು ಬೇಕು,
ಕನಸು ನನಸಾಗಲು ತಾಳ್ಮೆ ಬೇಕು.

ಸೋಲು ಬಂದರೆ ಕುಗ್ಗಬೇಡ,
ನಂಬಿಕೆಯ ದೀಪ ಆರಿಸಬೇಡ.
ಧೈರ್ಯವನ್ನು ಜೊತೆಗಿಟ್ಟುಕೊಂಡು,
ತಾಳ್ಮೆಯ ಹಾದಿಯಲ್ಲಿ ನಡೆಯು.

ತಾಳ್ಮೆಯ ಹೃದಯಕ್ಕೆ ಭಯವಿಲ್ಲ,
ಸಹನೆಯ ಬದುಕಿಗೆ ಸೋಲಿಲ್ಲ.
ತಾಳ್ಮೆಯೇ ಜೀವನದ ಮಹಾ ಸಂಪತ್ತು,
ಅದೇ ಮಾನವನ ನಿಜವಾದ ಶ್ರೇಷ್ಠತ್ವ.

–ಎ ಎನ್. ರಮೇಶ

## ಪ್ರೀತಿಸಿ ಮದ್ವೆಯಾದ ಕೆಲವೇ ಗಂಟೆಗಳಲ್ಲಿ ದುರಂತ: ಬಳ್ಳಾರಿಯಲ್ಲಿ ತಾಳಿ ಕಟ್ಟಿದ ಬೆನ್ನಲ್ಲೇ ನವವಿವಾಹಿತನ ಬರ್ಬರ ಕೊಲೆ

o ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ: ಮದುವೆಯ ಸಂಭ್ರಮದ ಮನೆ ಇನ್ನು ಮಂಟಪದ ಸಿಂಗಾರದಿಂದಲೂ ಹೊರಬಂದಿರಲಿಲ್ಲ. ಹೊಸ ಜೀವನದ ನೂರಾರು ಕನಸುಗಳೊಂದಿಗೆ ಕೈಹಿಡಿದ ದಂಪತಿಗಳ ಮುಖದಲ್ಲಿನ ನಗು ಇನ್ನೂ ಮಾಸಿರಲಿಲ್ಲ. ಆದರೆ, ವಿಧಿಯ ಕ್ರೂರ ಆಟಕ್ಕೆ ಮದುವೆಯಾಗಿ ಕೆಲವೇ ಗಂಟೆಗಳು ಕಳೆಯುವಷ್ಟರಲ್ಲಿ ನವವರನೊಬ್ಬ ಭೀಕರವಾಗಿ ಕೊಲೆಯಾದ ಹೃದಯವಿದ್ರಾವಕ ಘಟನೆಯೊಂದು ಬಳ್ಳಾರಿಯಲ್ಲಿ ನಡೆದಿದ್ದು, ಮದುವೆ ಮನೆ ಕ್ಷಣಾರ್ಧದಲ್ಲಿ ಸ್ಮಶಾನ ಸದೃಶವಾಗಿದೆ.**

ಬಳ್ಳಾರಿ ನಗರದ 29ನೇ ವಾರ್ಡ್‌ನ ಸಮತಾ ನಗರದಲ್ಲಿ ಈ ದುರ್ಘಟನೆ ನಡೆದಿದ್ದು, ಸ್ಥಳೀಯ ಬೋಟಿ ಮಾರ್ಕೆಟ್ ಹಾಗೂ ಗಾರೆ ಕೆಲಸ ಮಾಡುತ್ತಿದ್ದ ನಬಿ ರಸೂಲ್ ಕೊಲೆಯಾದ ದುರ್ದೈವಿ. ಸುಮಾರು



15 ದಿನಗಳ ಹಿಂದಷ್ಟೇ ವಿಚ್ಛೇದನ ಪಡೆದಿದ್ದ ಯುವತಿಯನ್ನು ನಬಿ ರಸೂಲ್ ಪ್ರಾಣದಂತೆ ಪ್ರೀತಿಸುತ್ತಿದ್ದರು. ಇಬ್ಬರೂ ಜೊತೆಯಾಗಿ ಮನೆಗೆ ಮರಳಿದ ಬಳಿಕ, ಇವರ ಪ್ರೀತಿಯನ್ನು ಒಪ್ಪಿದ ಎರಡೂ ಕುಟುಂಬಸ್ಥರು ಗುರುವಾರವಷ್ಟೇ ಅತ್ಯಂತ ಸಡಗರದಿಂದ ಮದುವೆ ಹಾಗೂ ಆರತಕ್ಷತೆ ಕಾರ್ಯಕ್ರಮವನ್ನು ನೆರವೇರಿಸಿದ್ದರು.

ಆರತಕ್ಷತೆಯ ಸಡಗರ ಮುಗಿಸಿ ರಾತ್ರಿ ಸುಮಾರು 11:30ರ ವೇಳೆಗೆ ನಬಿ ರಸೂಲ್ ಮನೆಯಲ್ಲಿದ್ದಾಗ ಆತನ ಮೊಬೈಲ್‌ಗೆ ಸ್ನೇಹಿತನೊಬ್ಬನಿಂದ ಕರೆ ಬಂದಿದೆ. ಸ್ನೇಹಿತ ಕರೆಯುತ್ತಿದ್ದಾನೆ, ಮಾತನಾಡಿಕೊಂಡು ಬರುತ್ತೇನೆ ಎಂದು ಪತ್ನಿಗೆ ಹೇಳಿ ಮನೆಯಿಂದ ಹೊರಟ ನಬಿ, ಮರಳಿ ಮನೆಗೆ ಬರಲೇ ಇಲ್ಲ. ಇತ್ತ ಪತಿಗಾಗಿ ನವವಧು ಹಾಗೂ ಕುಟುಂಬಸ್ಥರು ಆತಂಕದಿಂದ ಕಾಯುತ್ತಿದ್ದಾಗಲೇ ತಡರಾತ್ರಿ 2 ಗಂಟೆಯ ಸುಮಾರಿಗೆ ಬರಸಿಡಿಲಿನಂತಹ ಸುದ್ದಿಯೊಂದು ಬಂದಿದೆ.

ಮನೆಯಿಂದ ಕೇವಲ 700 ಮೀಟರ್ ದೂರದಲ್ಲಿ ನಬಿ ರಸೂಲ್ ರಕ್ತದ ಮಡುವಿನಲ್ಲಿ ಕೊಲೆಯಾಗಿ ಬಿದ್ದಿರುವುದು ಪತ್ತೆಯಾಗಿದೆ. ಇಡೀ ದಿನ ಸಂತೋಷದಿಂದ ಕಂಗೊಳಿಸುತ್ತಿದ್ದ ಮನೆಯಲ್ಲಿ ಮದುಮಗನ ಕಳೇಬರಹ ಕಂಡು ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ನವವಧುವಿನ ಆಕ್ರಂದನ ನೆರೆದಿದ್ದವರ ಕಣ್ಣಾಲಿಗಳನ್ನೂ ಒದ್ದೆಯಾಗಿಸಿದ್ದು, ಇಡೀ ಗ್ರಾಮವೇ ಕಂಬನಿ ಮಿಡಿಯುವಂತೆ ಮಾಡಿದೆ.

ವಿಷಯ ತಿಳಿಯುತ್ತಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಮನ್ ಪನ್ನೇಕರ್, ಡಿವೈಎಸ್‌ಪಿ ಸ್ವನದಾಳ ಹಾಗೂ ಇತರೆ ಹಿರಿಯ ಪೊಲೀಸ್ ಅಧಿಕಾರಿಗಳು ಮಧ್ಯರಾತ್ರಿಯೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪೊಲೀಸರು ಘಟನಾ ಸ್ಥಳದ ಮಹಜರು ನಡೆಸಿ ಪ್ರಮುಖ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದು, ಪ್ರೀತಿ–ಮದುವೆಯ ಹಿನ್ನೆಲೆಯಲ್ಲೇ ಈ ಹತ್ಯೆ ನಡೆದಿದೆಯೇ ಅಥವಾ ಹಳೆಯ ವೈಷಮ್ಯ ಕಾರಣವೇ ಎಂಬ ಆಯಾಮದಲ್ಲಿ ತನಿಖೆ ಕೈಗೊಂಡಿದ್ದಾರೆ. ಸದ್ಯ ಆರೋಪಿಗಳ ಪತ್ತೆಗೆ ಪೊಲೀಸರು ಜಾಲ ಬೀಸಿದ್ದಾರೆ.

## ಬಿಜೆಪಿ ಮುಖಂಡ ಕೆ.ಕರಿಯಪ್ಪ ಹುಟ್ಟುಹಬ್ಬದ ಅಂಗವಾಗಿ ಸಸಿನೆಟ್ಟ ವನಸಿರಿ ಫೌಂಡೇಷನ್

### ಅಮರೇಗೌಡ ಮಲ್ಲಾಪುರ ಗಿಡಗಳ ಮೇಲೆ ಪ್ರೀತಿ,ವಾತ್ಸಲ್ಯ ಹೊಂದಿರುವ ವ್ಯಕ್ತಿ ಅಹಂಕಾರದ ವ್ಯಕ್ತಿಯಲ್ಲ ....ಕೆ ಕರಿಯಪ್ಪ

o ನೈಜ್ಯ ದೆಸೆ ನ್ಯೂಸ್

**ಸಿಂಧನೂರು ತಾಲೂಕಿನ ಚನ್ನಳ್ಳಿ ಗ್ರಾಮದ ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಆವರಣದಲ್ಲಿ ವನಸಿರಿ ಫೌಂಡೇಶನ್ ಮತ್ತು ಅಖಂಡ ಭೂಮಿ ಫೌಂಡೇಶನ್ ವತಿಯಿಂದ ಗ್ರಾಮೀಣ ಯುವ ಮೋರ್ಚ ಅಧ್ಯಕ್ಷರಾದ ನಕ್ಕಂಟಿ ವಂಶಿ ನೇತೃತ್ವದಲ್ಲಿ ಕೆ.ಕರಿಯಪ್ಪ ಅಣ್ಣನವರ 60 ನೆಯ ಹುಟ್ಟು ಹಬ್ಬದ ಅಂಗವಾಗಿ 60 ಸಸಿ ನೆಡಲಾಯಿತು.**

ಹುಟ್ಟುಹಬ್ಬದ ಅಂಗವಾಗಿ ಸಸಿನೆಟ್ಟು ಮಾತನಾಡಿದ ಬಿಜೆಪಿ ಮುಖಂಡ ಕೆ ಕ–ರಿಯಪ್ಪ ಮನೆಗೊಂದು ಮರ ಊರಿಗೊಂದು ವನ ಎನ್ನುವಂತೆ ಪ್ರತಿಯೊಬ್ಬರೂ ಗಿಡಮರಗಳನ್ನು ಬೆಳೆಸಲು ಮುಂದಾಗಬೇಕು. ಗಿಡಮರಗಳನ್ನು ಹೆಚ್ಚು ಹೆಚ್ಚು ಬೆಳೆಸುವುದ–ರಿಂದ ನಮ್ಮ ಭೂಮಿಯಲ್ಲಿನ ನೈಸರ್ಗಿಕ ಸಂಪತ್ತು ಉಳಿಯುತ್ತದೆ.ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ತಾಯಿಯ ಹೆಸ–ರಿನಲ್ಲಿ ಒಂದು ಸಸಿ ನೆಡಿ ಎಂಬ ಮಹತ್ವಕಾಂಕ್ಷೆ ಯೋಜನೆಯನ್ನು ಜಾರಿಗೆ ತಂದಿದ್ದಾರೆ




ಇದನ್ನು ನಾವೆಲ್ಲರೂ ತಾಯಿಯ ಹೆಸರಿನಲ್ಲಿ ಒಂದೊಂದು ಸಸಿನೆಡೋಣ.ನಮ್ಮ ಸುತ್ತಮುತ್ತ ಗಿಡಮರಗಳನ್ನು ಬೆಳಸಿದಾಗ ಮಾತ್ರ ನಾವು ಶುದ್ಧ ಗಾಳಿ ಪಡೆಯಲಿಕ್ಕೆ ಸಾಧ್ಯ. ಇಂದು ಸಿಂಧನೂರು ಹಚ್ಚ ಹಸಿರಾಗಲು ಕಾರಣ ನಮ್ಮ ವನಸಿರಿ ಅಮರೇಗೌಡ ಮಲ್ಲಾಪುರ ಅವರು ಪ್ರತಿಯೊಬ್ಬರ ಹುಟ್ಟುಹಬ್ಬದ ಅಂಗವಾಗಿ ಒಂದೊಂದು ಸಸಿ ನೆಡುತ್ತಿದ್ದಾರೆ ಇಂದು ಕೂಡಾ ನನ್ನ 60 ನೇ ಹುಟ್ಟುಹಬ್ಬದ ಅಂಗವಾಗಿ 60ಸಸಿಗಳನ್ನು ಈ ಗ್ರಾಮದಲ್ಲಿ ನೆಡಲು ಪ್ರೇರೇಪಿಸಿದ್ದಾರೆ.ವನಸಿರಿ ತಂಡ ಪ್ರತಿ ದಿನ ಪರಿಸರ ಸಂರಕ್ಷಣೆಯಲ್ಲಿ ತೊಡಗಿರುತ್ತದೆ.

ಗಿಡಗಳನ್ನು ಹಚ್ಚುವುದರಲ್ಲಿ ಬಹಳ ಪರಿಶ್ರಮ ಇದೆ.ಅವರ ಪರಿಸರ ಕಾಳಜಿಗೆ ನಾನು ಯಾವಾಗಲೂ ಸಹಕರಿಯಾಗಿರುತ್ತೇನೆ.ಇಂತಹ ಕಾರ್ಯಗಳನ್ನು ಕೆಲ ವ್ಯಕ್ತಿಗಳು ಅಮರೇಗೌಡ ಅವರಿಗೆ ಅಹಂಕಾರ ಇದೆ,ಸ್ವಾರ್ಥ ಇದೆ ಎಂದು ಟೀಕೆ ಮಾಡುವವರು ಟೀಕೆ ಮಾಡುವುದಲ್ಲೇ ಕಾಲ ಕಳೆಯುತ್ತಾರೆ.ಅಮರೇಗೌಡ ಮಲ್ಲಾಪುರ ಗಿಡಗಳ ಮೇಲೆ ಪ್ರೀತಿ,ವಾತ್ಸಲ್ಯ ಹೊಂದಿರುವ ವ್ಯಕ್ತಿ ಅಹಂಕಾರದ ವ್ಯಕ್ತಿಯಲ್ಲ.ಇಂತಹ ಟೀಕೆಗಳಿಗೆ ಅಮರೇಗೌಡ ಎಂದಿಗೂ ಕಿವಿ ಗೊಡಬೇಡ ನಿಮ್ಮ ಜೊತೆ ನಾನಿದ್ದೇನೆ ಎಂದು 60 ನೇ ಹುಟ್ಟುಹಬ್ಬದ ಸಂಧರ್ಭದಲ್ಲಿ ಬಿಜೆಪಿ ಮುಖಂಡ ಕೆ ಕರಿಯಪ್ಪ ಅವರು ತಿಳಿಸಿದರು. ಈ ಸಂಧರ್ಭದಲ್ಲಿ ಚನ್ನಳ್ಳಿ ಗ್ರಾಮದ ಹಿರಿಯರು,ಯುವಕರು,ಬಿಜೆಪಿ ಮುಖಂಡರು ಇದ್ದರು

## ಅರಕೇರಾದಲ್ಲಿ ಜಗದೀಶಪ್ಪ ಬಿ.ಗಣೇಕಲ್ ಅವರಿಗೆ ಆತ್ಮೀಯ ಸನ್ಮಾನ

o ನೈಜ್ಯ ದೆಸೆ ನ್ಯೂಸ್

ಅರಕೇರಾ: ಜ್ಞಾನದ ದೀವಿಗೆಯಾಗಿ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಿದ ಪ್ರೌಢಶಾಲಾ ಶಿಕ್ಷಕರಾದ ಜಗದೀಶಪ್ಪ ಬಿ.ಗಣೇಕಲ್ ಅವರು ಇತ್ತೀಚಿಗೆ ತಮ್ಮ ಸುದೀರ್ಘ ಸೇವೆಯಿಂದ ವಯೋನಿವೃತ್ತಿ ಹೊಂದಿದರು.



ಅವರ ನಿವೃತ್ತಿ ಜೀವನಕ್ಕೆ ಶುಭಕೊರುವ ಹಾಗೂ ಅವರ ಸೇವೆಗೆ ಕೃತಜ್ಞತೆ ಸಲ್ಲಿಸುವ ಸಲ್ಲುವಾಗಿ ಅರಕೇರಾದಲ್ಲಿನ ಶ್ರೀಸೂಗೂರೇಶ್ವರ ಯುವ ಸಂಘದವತಿಯಿಂದ ಆತ್ಮೀಯ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸನ್ಮಾನವನ್ನು ಶ್ರೀಸೂಗೂರೇಶ್ವರ ಯುವ ಸಂಘದ ಕಾರ್ಯದರ್ಶಿಗಳಾದ ಚನ್ನವೀರಯಸ್ವಾಮಿ ಹಿರೇಮಠ ಅವರು ಜಗದೀಶಪ್ಪ ಬಿ.ಗಣೇಕಲ್ ಅವರನ್ನು ಸನ್ಮಾನಿಸಿಗೌರವಿಸಿದರು. ಶಿಕ್ಷಣ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆ ವಿದ್ಯಾರ್ಥಿಗಳಲ್ಲಿ ಜ್ಞಾನದ ಹಸಿವನ್ನು ಹೆಚ್ಚಿಸಲು ಅವರು ಪಟ್ಟ ಶ್ರಮ ಮತ್ತು ಅವರ ಆದರ್ಶಪ್ರಾಯ ಜೀವನವನ್ನು ಚನ್ನವೀರಯ್ಯಸ್ವಾಮಿ ಹಿರೇಮಠ ಅವರು ಸಂಧರ್ಭದಲ್ಲಿ ಸ್ಮರಿಸಿದರು. ಜಗಧೀಶಪ್ಪ ಅವರ ಭೋದನಾ ಶೈಲಿ,ಶಿಸ್ತು ಮತ್ತು ವಿದ್ಯಾರ್ಥಿಗಳ ಮೇಲಿನ ಪ್ರೀತಿ ಅನೇಕರಿಗೆ ಸ್ಫೂರ್ತಿಯಾಗಿತ್ತು ಎಂದು ಅವರು ಚನ್ನವೀರಯ್ಯಸ್ವಾಮಿ ಹಿರೇಮಠರವರು ಬಣ್ಣಿಸಿದರು. ಸಂದರ್ಭದಲ್ಲಿ ಸೂಗೂರೇಶ್ವರ ಎಸ್ ಗುಡಿ ,ಮಹಾಂತೇಶಸ್ವಾಮಿ ಹಿರೇಮಠ,ಮಲ್ಲಯ್ಯನಾಯಕ ಅಡಕಲಗುಡ್ಡ ಉಪಸ್ಥಿತರಿದ್ದರು.

## ಬಸವಶ್ರೀ ನೌಕರರ ಪತ್ತಿನ ಸಹಕಾರ ಸಂಘದಿಂದ ಸರಕಾರಿ ನಿವೃತ್ತ ನೌಕರರ ಸನ್ಮಾನ ಸಮಾರಂಭ



o ನೈಜ್ಯ ದೆಸೆ ನ್ಯೂಸ್

**ಸಿಂಧನೂರು ಜು 17 : ಶ್ರೀ ಬಸವಶ್ರೀ ನೌಕರರ ಪತ್ತಿನ ಸಹಕಾರ ಸಂಘ ನಿ., ಮಾನವಿ ಶಾಖೆ ಸಿಂಧನೂರು ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ನಿವೃತ್ತ ಸರಕಾರಿ ನೌಕರರ ಸಮಾರಂಭವನ್ನು ಅದ್ದೂ–ರಿಯಾಗಿ ಆಯೋಜಿಸಲಾಗಿತ್ತು.ಈ ಕಾರ್ಯಕ್ರಮವನ್ನು ಉದ್ಘಾಟಿಸಿದ ಬಸವಶ್ರೀ ನೌಕರರ ಪತ್ತಿನ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ ಶ್ರೀ ವಿರೇಶ ಎನ್. ಹೊಸೂರು ಅವರು ಮಾತನಾಡುತ್ತ ಶ್ರೀ ಡಾ ॥ ಶಂಕರಗೌಡ ಎಸ್. ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ 2003 ರಲ್ಲಿ ಸ್ಥಾಪನೆಯಾದ ಸಂಘವು ಇಂದು 11 ಶಾಖೆಗಳನ್ನು ಒಳಗೊಂಡು 650 ಕೋಟಿ ವ್ಯವಹಾರವನ್ನು ಹೊಂದಿದೆ ಎಂದರು.ನಮ್ಮ ಸಂಘವು ಹಲವು ಸಾಮಾಜಿಕ ಕಾರ್ಯಗಳನ್ನು ಮಾಡುತ್ತಾ ಬಂದಿದೆ ಅದರಲ್ಲಿ ಸಂಘದಿಂದ ಪ್ರತಿ ವರ್ಷವೂ ಸರ್ವ ಸದಸ್ಯರ ಮಕ್ಕಳು ಎಸ್. ಎಸ್. ಎಲ್. ಸಿ ಯಲ್ಲಿ 90% ಮತ್ತು ಪಿ. ಯು. ಸಿ ಯಲ್ಲಿ 85% ಗಿಂತ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತರನ್ನು ಗುರುತಿಸಿ ಕಳೆದ ಸಾಲಿನಲ್ಲಿ 143 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಮಾಡಲಾಯಿತು ಎಂದರು ಸಂಘವು ಪ್ರತಿ ವರ್ಷ ಬೇಸಿಗೆಯಲ್ಲಿ ಪ್ರತಿ ಶಾಖೆಗಳಲ್ಲಿ ಬೇಸಿಗೆಯಲ್ಲಿ ಶುದ್ಧ ಕುಡಿಯುವ ನೀರಿನ ಅರವಟಿಗೆಯನ್ನು ಮಾಡಿಕೊಂಡು ಬರುತ್ತಿದೆ ಎಂದರು ಸಂಘದ ಸದಸ್ಯರು ಅಕಾಲಿಕ ಮರಣ ಅಥವಾ ಅಪಘಾತದಲ್ಲಿ ಮರಣ ಹೊಂದಿದಲ್ಲಿ ನಮ್ಮ ಸಂಘದ ಸ್ವಂತ ಯೋಜನೆ ಅಡಿಯಲ್ಲಿ ರೂಪಿಸಲಾದ " ಬಸವಶ್ರೀ ನಿಧಿ ಯೋಜನೆ " ಜಾರಿಯಲ್ಲಿದೆ ಈ ಯೋಜನೆ ಸತತ 19ನೇ ವರ್ಷಕ್ಕೆ ಮುಂದುವರೆದಿದೆ. ಈ ಯೋಜನೆಯಲ್ಲಿ ಅಪಘಾತ ಅಥವಾ ಸ್ವಾಭಾವಿಕವಾಗಿ ಸಾವನ್ನಪ್ಪಿರುವ ಸಾಲಗಾರರಿಗೆ ಈ ವರ್ಷದಿಂದ ಅಂದರೆ 2026–27 ಸಾಲಿನಿಂದ ರೂ 5,00,000/– ಗಳವರೆಗೆ ಸಾಲ ಪಡೆದಿರುವ ಸದಸ್ಯ–ರಿಗೆ ವಿಮಾ ಸೌಲಭ್ಯ ಪಡೆದ ಸಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತದೆ ಎಂದರು ಕಲ್ಯಾಣ ಕರ್ನಾಟಕದ ಹಿಂದುಳಿದ 2 ಸರಕಾರಿ ಶಾಲೆಗಳಿಗೆ ಪ್ರತಿ ವರ್ಷ ಊಟದ ತಟ್ಟೆ ಹಾಗೂ ಗ್ಲಾಸುಗಳನ್ನು ನೀಡಲಾಗುತ್ತದೆ ಆಯ್ದ ಜಾಗಗಳಲ್ಲಿ ಸಸಿ ನೆಡುಸುವುದು ಇನ್ನಿತರ ಚಟುವಟಿಕೆಗಳನ್ನು ನಮ್ಮ ಸಂಘ ಮಾಡಿಕೊಂಡು ಬರುತ್ತಿದೆ ಎಂದರು ಈ ಸಂದರ್ಭದಲ್ಲಿ ಅತಿಥಿಗಳಾದ ಶ್ರೀ. ಟಿ. ಅಯ್ಯಪ್ಪ ನಿವೃತ್ತ ನೌಕರರ ಸಂಘದ ಅಧ್ಯಕ್ಷರು, ಸಂಘದ ಕಾನೂನು ಸಲಹೆಗಾರರಾದ ಶ್ರೀ ಬಸವರಾಜ ಅಮರಪುರ, ನಮ್ಮ ಸಂಘದ ಮಾಜಿ ನಿರ್ದೇಶಕರಾದ ಶ್ರೀ ಸಂಗನಗೌಡ, ನಿವೃತ್ತ ಕ. ಖ. ಖ ಶ್ರೀ ಬಸವರಾಜ, ಸಂಘದ ಸದಸ್ಯರಾದ ಶ್ರೀ ತಿಮ್ಮರೆಡ್ಡಿ,ಶ್ರೀ ಅಂಬಣ್ಣ, ಶ್ರೀ ಚನ್ನಪ್ಪ, ಶ್ರೀ ತೀಥ–ರ್ನಗೌಡ ಶಾಖಾ ವ್ಯವಸ್ಥಾಪಕರಾದ ಶ್ರೀ ಸೂಗನಗೌಡ ಚಿಕಲಾಪರ್ವಿ, ಸಿಬ್ಬಂದಿಗಳಾದ ರವಿಕುಮಾರ ಅಂಬಿಕಾ, ಆಕಾಶಕುಮಾರ್ ಇನ್ನಿತರರು ಉಪಸ್ಥಿತರಿದ್ದರು.**

## ಕಂಪ್ಲಿ ಪಟ್ಟಣಕ್ಕೆ ನೀರೊದಗಿಸಲು ತುಂಗಭದ್ರ ನದಿಯಲ್ಲಿ ರಿಂಗ್‌ಬಂಡಿ ನಿರ್ಮಾಣ : ಬಿ.ಮಲ್ಲಿಕಾರ್ಜುನ

o ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಪಟ್ಟಣದ ಜನತೆಗೆ ನೀರೊದಗಿಸುವ ಕಂಪ್ಲಿ ಕೋಟೆಯ ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಕ್ಷೀಣಿಸಿರುವುದರಿಂದ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜಿನಲ್ಲಿ ಯಾವುದೇ ರೀತಿಯ ತೊಂದರೆಯಾಗಡಂತೆ ನದಿಯ ವಿವಿಧ ಭಾಗದಲ್ಲಿ ರಿಂಗ್ ಬಂಡಿಗಳನ್ನು ನಿರ್ಮಿಸಲಾಗಿದೆ ಎಂದು ಪುರಸಭೆ ಪ್ರಭಾರ ಮುಖ್ಯಾಧಿಕಾರಿ ಬಿ.ಮಲ್ಲಿಕಾರ್ಜುನ ತಿಳಿಸಿದರು.**

ಅವರು ಪಟ್ಟಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, ನದಿಯ ಆಯಕಟ್ಟಿನ ಸ್ಥಳಗಳಲ್ಲಿ ಪ್ಲಾಸ್ಟಿಕ್ ಚೀಲಗಳಲ್ಲಿ



ಮರಳು ತುಂಬಿ ತಾತ್ಕಾಲಿಕ ರಿಂಗ್‌ಬಂಡಿಗಳ

ನಿರ್ಮಾಣ ಮಾಡಲಾಗಿದೆ. ಇದರಿಂದ ಸದ್ಯಕ್ಕೆ ನೀರಿನ ತೊಂದರೆಯಾಗುವುದಿಲ್ಲ. ಮುಂದಿನ ಮೂರು ತಿಂಗಳು ನೀರು ಪೂರೈಕೆಗೆ ಜಾಕ್ವೆಲ್‌ದಿಂದ ಎರಡು ಕಿ.ಮೀ. ಅಂತರದಲ್ಲಿರುವ ನೀರಿನ ಮಡುಗು(ಕೊಳ್ಳ) ಬಳಿಯಿಂದ ನೀರು ಪಡೆಯಲಾಗುವುದು. ಅದಕ್ಕಾಗಿ ಮರಳಿನ ಚೀಲಗಳಿಂದ ತಾಂತ್ರಿಕವಾಗಿ ರಿಂಗ್‌ಬಂಡಿಗಳ ಟೆಂಡರ್ ಕರೆಯಲಾಗುವುದು. ಪಟ್ಟಣದ 23 ವಾರ್ಡುಗಳಲ್ಲಿ 53 ಸಾವಿರ ಜನಸಂಖ್ಯೆ ಇದ್ದು, ನಾಲ್ಕು ಮೇಲ್ತೊಟ್ಟಿಗಳ ಮೂಲಕ 4.,5, ಎಂ. ಎಲ್.ಡಿ. ನೀರು ಸಂಗ್ರಹಿಸಿ ಪ್ರತಿದಿನ ಬಿಟ್ಟು ದಿನ ಪೂರೈಸಲಾಗುತ್ತಿದೆ. ಆಕಸ್ಮಿಕವಾಗಿ ನೀರು ಪೂರೈಕೆ ತೊಂದರೆಯಾದರೆ, ಟ್ಯಾಂಕ್ ಮೂರ್ಲಕ ನೀರು ಪೂರೈಸಲಾಗುವುದು ಎಂದು ತಿಳಿಸಿದರು.

ನೀರು ಮಿತವಾಗಿ ಬಳಸಿ, ವ್ಯರ್ಥ ಮಾಡಬೇಡಿಃ– ನದಿಯಲ್ಲಿ ನೀರಿನ ಹರಿವು ಕಡಿಮೆ ಇರುವುದರಿಂದ ಸಮರ್ಪಕವಾಗಿ ಪಟ್ಟಣದ ಜನತೆಗೆ ಸಮರ್ಪಕವಾಗಿ ನೀರು ಪೂರೈಸಲು ಕಷ್ಟ ಸಾಧ್ಯವಾಗಿರುವುದರಿಂದ ಹಾಗೂ ಮಳೆಯೂ ಕಡಿಮೆ ಇರುವುದರಿಂದ ನದಿಯಲ್ಲಿ ನೀರಿನ ಹರಿವು ಕಡಿಮೆ ಇದ್ದು, ಪಟ್ಟಣದ ಜನತೆ ಪುರಸಭೆ ಪೂರೈಸುವ ನೀರನ್ನು ಮಿತವಾಗಿ ಬಳಸಬೇಕು ಮತ್ತು ವ್ಯರ್ಥವಾಗಿ ನೀರನ್ನು ಬೀದಿಗಳಿಗೆ ಬಿಡಬಾರದು, ನಲ್ಲಿಗಳಲ್ಲಿ ನೀರು ಸೋರದಂತೆ ಗಮನಹರಿಸಬೇಕೆಂದು ತಿಳಿಸಿದರು.

## ಹಂಚಿನಾಳ ಕೆ ಕ್ಯಾಂಪ್‌ನಲ್ಲಿ ಸಾಂಕ್ರಾಮಿಕ ರೋಗಗಳ ಕುರಿತು ಜಾಗೃತಿ ಕಾರ್ಯಕ್ರಮ: ನಾಯಿ ಕಡಿತದ ಬಗ್ಗೆ ಎಚ್ಚರಿಕೆ ವಹಿಸಲು ಆರೋಗ್ಯ ಇಲಾಖೆ ಸಲಹೆ

o ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಾರವೇ ಸಿಂಧನೂರ್ ಪ್ರಾಥಮಿಕ ಆರೋಗ್ಯ ಕೇಂದ್ರ ಗಾಂಧಿನಗರ ಇವರ ವ್ಯಾಪ್ತಿಗೆ ಬರುವ ಹಂಚಿನಾಳ ಇ ಕ್ಯಾಂಪನಲ್ಲಿ ಸಾಂಕ್ರಾಮಿಕ ರೋಗಗಳ ಕುರಿತು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು ಸದರಿ ಕಾರ್ಯಕ್ರಮದಲ್ಲಿ ಶ್ರೀಮತಿ ಗೀತಾ ಹಿರೇಮಠ್ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ತಾಲೂಕ ಆರೋಗ್ಯ ಇವರು ಮಾತನಾಡಿ ಬೀದಿ ನಾಯಿಗಳ ಕಚ್ಚುವಿಕೆಯಿಂದ ಅಥವಾ ಸಾಕು ಪ್ರಾಣಿಗಳ ಕಚ್ಚುವಿಕೆಯಿಂದ ಉಂಟಾಗುವ ತೊಂದರೆಗಳನ್ನು ಬರದಂತೆ ಲಸಿಕೆಯನ್ನು ಹಾಕಿಸುವುದು ಬಹಳ ಮುಖ್ಯವಾಗಿರುತ್ತದೆ,**

ವಿಶೇಷವಾಗಿ ನಾಯಿ ಕಚ್ಚುವಿಕೆಯಿಂದ ರೇಬಿಸ್ ರೋಗ ಬರುವ ಸಾಧ್ಯತೆ ಹೆಚ್ಚಾಗಿರುತ್ತದೆ ಮಾನವರಲ್ಲಿ ಆರಂಭಿಕವಾಗಿ ಲಕ್ಷಣಗಳು ಕಂಡುಬರುವಂತದು ತಲೆನೋವು ಜ್ವರ



ಅನಾರೋಗ್ಯದ ಭಾವನೆ, ನೋಯುತ್ತಿರುವ ಗಂಟಲು ಮತ್ತು ಕೆಮ್ಮು ಮತ್ತು ಕಚ್ಚಿದ ಜಾಗದಲ್ಲಿ ವಿಪರೀತ ತುರಿಕೆ ನೋವು ಅಥವಾ ಮರಗಟ್ಟುವಿಕೆ ಸುಸ್ತು ಮತ್ತು ನಿಶಕ್ತಿ ನೀರು ಹಾಗೂ ಗಾಳಿನ ಕಂಡರೆ ಭಯ, ವಿಪರೀತ ಕೋಪ ಗೊಂದಲ ಮತ್ತು ಹುಚ್ಚುತನ, ನೀರು ನುಂಗಲು ಕಷ್ಟವಾಗುವುದು ಮತ್ತು ಲಾಲರಸ ಸುರಿವುದು ಸ್ನಾಯು ಸೆಳೆತ ಮತ್ತು ಪಾರ್ಶ್ವಯು ದೇಹದ ಭಾಗಗಳು ನಿಷ್ಕ್ರಿಯಗೊಳ್ಳುವುದು ಲಕ್ಷಣಗಳಾಗಿರುವುದ–ರಿಂದ ಎಚ್ಚರಿಕೆಯನ್ನು ವಹಿಸಬೇಕು ನಾಯಿ ಬೆಕ್ಕು ಅಥವಾ ಹಾವು ಇನ್ಯಾವುದೇ ಪ್ರಾಣಿ ಕಚ್ಚಿದರೆ ಅಥವಾ ಚುರಿದರೆ ಗಾಯವನ್ನು ತಕ್ಷಣ ಸೋಪಿನಿಂದ ಚೆನ್ನಾಗಿ ತೊಳೆಯಿರಿ ತಡ ಮಾಡದೆ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಿ ರೇಬಿಸ್ (Anti-Rabies vaccine ) ಲಸಿಕೆ ಪಡೆಯಿರಿ ನಿಮಗಾಗಲಿ ಅಥ–ವಾ ನಿಮ್ಮ ಪರಿಚಯದವರಿಗಾಗಲಿ ಪ್ರಾಣಿ ಕಚ್ಚಿದೆ ಆಗಿದ್ದಲ್ಲಿ ಯಾವ ಪ್ರಾಣಿ ಕಚ್ಚಿದೆ ಮತ್ತು ಎಷ್ಟು ಸಮಯವಾಗಿದೆ ಎಂದು ತಿಳಿದು ತುರ್ತು ಚಿಕಿತ್ಸಾ ಕ್ರಮಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಂಡು ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆದುಕೊಳ್ಳಬೇಕು ಎಂದು ತಿಳಿಸಿದರು

ಪ್ರತಿ ವರ್ಷ ವಿಶ್ವದಾದ್ಯಂತ ಸುಮಾರು ಹತ್ತಾರು ಸಾವಿರ ಜನರನ್ನು ಕೊಲ್ಲುತ್ತದೆ ಆದ–ರೆ ಅನೇಕರಿಗೆ ಅದರ ಗಂಭೀರ ಸ್ವರೂಪದ ಬಗ್ಗೆ ತಿಳಿದಿರುವುದಿಲ್ಲ ಈ ಮಾರಕ ವೈರಸ್ ನರಮಂಡಲದ ಮೇಲೆ ದಾಳಿ ಮಾಡುತ್ತದೆ ಮತ್ತು ಲಕ್ಷಣಗಳು ಕಾಣಿಸಿಕೊಂಡು ನಂತರ ಮಾರಕವಾಗಿ ಸಮಗ್ರ ಬಗ್ಗೆ ಸಾಮಾನ್ಯವಾಗಿ ಯಾರು ತಿಳಿದುಕೊಳ್ಳುವುದಿಲ್ಲ ರೇಬಿಸ್ ಒಂದು ಗಂಭೀರವಾದ ವೈರಲ್ ಕಾಯಿಲೆಯಾಗಿದ್ದು ಇದು ಕೇಂದ್ರ ನರಮಂಡಲವನ್ನು ಆಕ್ರಮಿಸುತ್ತದೆ ಮತ್ತು ಮಾನವರು ಮತ್ತು ಪ್ರಾಣಿಗಳ ಮೇಲೆ ಪರಿಣಾಮ ಬೀರುತ್ತದೆ ಇದು ಪ್ರಾಥಮಿಕವಾಗಿ ಪ್ರಾಣಿಗಳ ಕಡಿತ ಅಥವಾ ಲಾಲರಸದ ಮೂಲಕ ಹರಡುತ್ತದೆ ಸಾಮಾನ್ಯವಾಗಿ ಕಡಿತ ನರಗಳು ಅಥವಾ ತೆರೆದ ಗಾಯಗಳ ಸಂಪರ್ಕದ ಮೂಲಕ ಪ್ರವೇಶಿಸುತ್ತದೆ ಇದನ್ನು ಲಸಿಕೆ ಹಾಕಿಸುವುದರ ಮೂಲಕ ತಡೆಗಟ್ಟಬಹುದಾದ ರೂಪಗಳಲ್ಲಿ ಕಂಡುಬರುತ್ತದೆ

ಸಾಮಾನ್ಯವಾಗಿ ರೇವಿಸ್ ಆಗಿರುವ ನಡುವಳಿಕೆಗಳು ಮತ್ತು ನೀರಿನ ಭಯ ಮತ್ತು ತಾಜಾ ಗಾಡಿಯ ಭಯ ನಂತರ ವಿಶಿಷ್ಟ ಲಕ್ಷಣಗಳನ್ನು ಉಂಟುಮಾಡುತ್ತದೆ ಮಾನವ ಪ್ರಕರಣಗಳಲ್ಲಿ ಸುಮಾರು 20ರಷ್ಟು ಪಾರಲಿಟಿಕ್ ರೇಬಿಸ್ ಕ್ರಮೇಣ ಸ್ನಾಯುಗಳ ಬೆಳವಣಿಗೆ ಹೊಂದಿಗೆ ನಿತನವಾಗಿ ಮುಂದುವರಿಯುತ್ತದೆ ಪಾರ್ಶ್ವಯು ಆಗುವಂತದ್ದು ಇಂದು ತಿಳಿಸಿದರು ವೈರಸ್ ಕೇಂದ್ರಗಳ ಮಂಡಲಕ್ಕೆ ಮುಂದುವರೆದಂತೆ ಅದು ಎರಡು ವಿಭಿನ್ನ ರುಪಯೋಗಗಳಲ್ಲಿ ಪ್ರಕಟವಾಗುತ್ತದೆ ಸಾಮಾನ್ಯವಾಗಿ ರೇಬಿಸಿದ್ದಕ್ಕೆ ಕಾರಣವಾಗುತ್ತದೆ ಆಕ್ರಮಣಕಾರಿ ನಡವಳಕೆ ಆಂದೋಲನ ಮತ್ತು ಚಡಪಡಿಕೆ ಎಂದು ತಿಳಿಸಲಾಯಿತು ಈ ಸಂದರ್ಭದಲ್ಲಿ ಸುಮಾ ಪಾಟೀಲ್ ಸಿ ಎಚ್ ಓ, ರೇಣುಕಾ ಪಿ ಎಚ್ ಸಿ ಓ, ಪದ್ಮಾವತಿ ಹೆಚ್‌ಐಓ, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ನೇಮಕಾತಿ ಪ್ರಕಟಣೆ

**NCPOR ನೇಮಕಾತಿ 2026 1 ಜಂಟಿ ವ್ಯವಸ್ಥಾಪಕ (ಆಡಳಿತ) ಹುದ್ದೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ 17 ಜುಲೈ 2026**

NCPOR ನೇಮಕಾತಿ 2026: 1 ಜಂಟಿ ವ್ಯವಸ್ಥಾಪಕ (ಆಡಳಿತ) ಹುದ್ದೆಗೆ ಅರ್ಜಿ ಸಲ್ಲಿಸಿ. ನ್ಯಾಷನಲ್ ಸೆಂಟರ್ ಫಾರ್ ಪೋಲಾರ್ ಅಂಡ್ ಓಷನ್ ರಿಸರ್ಚ್ (NCPOR) ತನ್ನ ಜುಲೈ 2026ರ ಅಧಿಕೃತ ಅಧಿಸೂಚನೆಯ ಮೂಲಕ ಜಂಟಿ ವ್ಯವಸ್ಥಾಪಕ (ಆಡಳಿತ) ಹುದ್ದೆಯನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಗೋವಾ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 20-ಆಗಸ್ಟ್-2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: ncpor.res.in

## ವಿಬಿ-ಜಿ ರಾಮ್‌ಜಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಿ

o ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ವಿಬಿ-ಜಿ ರಾಮ್‌ಜಿ ಯೋಜನೆಯು ಗ್ರಾಮೀಣ ಜನತೆಗೆ ಅನುಕೂಲವಾಗಿದ್ದು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಾಪಂ ಗ್ರಾಮೀಣ ಉದ್ಯೋಗ ಸಹಾಯಕ ನಿರ್ದೇಶಕ ಕೆ.ಎಸ್.ಮಲ್ಲನಗೌಡ ಹೇಳಿದರು. ದೇವಲಾಪುರ ಗ್ರಾಪಂ ಆವರಣದಲ್ಲಿ ವಿಬಿ-ಜಿ ರಾಮ್‌ಜಿ ಯೋಜನೆಯ ಪ್ರಚಾರ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದರು.**



ಪ್ರತಿ ಕುಟುಂಬಕ್ಕೆ ವರ್ಷದಲ್ಲಿ 125ಕೂಲಿದಿನಗಳು ದೊರಕಲಿದ್ದು, ಲಿಂಗ ತಾರತಮ್ಯವಿಲ್ಲದೆ 382ರೂ. ದಿನಗೂಲಿ ನೀಡಲಾಗುವುದು. ಗ್ರಾಮೀಣ ಜನತೆ ಉದ್ಯೋಗ ಅರಸಿ ಗುಳೆ ಹೋಗುವುದನ್ನು ತಪ್ಪಿಸಲು ಸ್ಥಳೀಯವಾಗಿ ಉದ್ಯೋಗ ದೊರಕಿಸಿ ಕೊಡಲಾಗುವುದು. ಜಲ ಸಂಬಂಧಿತ 107ಕಾಮಗಾರಿ, ಗ್ರಾಮೀಣ ಮೂಲ ಸೌಕರ್ಯಗಳ 90ಕಾಮಗಾರಿ, ಜೀವನೋಪಾಯಕ್ಕೆ ಸಂಬಂಧಿಸಿದ 86 ಕಾಮಗಾರಿ, ತೀವ್ರ ಹವಾಮಾನ ಘಟನೆಗಳ ಶಮನದ 35ಕಾಮಗಾರಿ ಸೇರಿ ಒಟ್ಟಾರೆ 318ಕಾಮಗಾರಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಗ್ರಾಮೀಣರು ಆರ್ಥಿಕ ಸ್ವಾವಲಂಬನೆಗೆ ವಿಬಿ-ಜಿ ರಾಮ್-ಜಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು ಎಂದರು. ಪಿಡಿಒ ಮಲ್ಲಿಕಾರ್ಜುನ, ತಾಲೂಕು ಐಇಸಿ ಸಂಯೋಜಕ ಎಚ್. ಹನುಮೇಶ, ತಾಂತ್ರಿಕ ಸಂಯೋಜಕ ಸಂಗಮೇಶ, ಸಾಮಾಜಿಕ ಲೆಕ್ಕ ಪರಿಶೋಧನಾ ಸಂಯೋಜಕ ಗೌರಿದೇವಿ, ಆಂಜನೇಯ ಇತರರಿದ್ದರು.

## 'ನಾನು' ಕನ್ನಡ ವೆಬ್ ಸರಣಿಗೆ ಮುಹೂರ್ತ

o ನೈಜ್ಯ ದೆಸೆ ನ್ಯೂಸ್

**ಮೈಸೂರು: ಜೆ.ಕೆ.ಪ್ರೊಡಕ್ಷನ್ ಮೈಸೂರ ಅವರ 'ನಾನು' ಎಂಬ ನೂತನ ವೆಬ್ ಸರಣಿಯ ಚಿತ್ರೀಕರಣ ಮುಹೂರ್ತ ಸಮಾರಂಭ ಮೈಸೂರಿನ ಬಂಬು ಬಜಾರ ರೋಡಲ್ಲಿರುವ ಶ್ರೀ ಸತ್ಯನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ಸರಳವಾಗಿ ನೆರವೇರಿತು.**



ಮುಖ್ಯ ಅತಿಥಿಗಳಾಗಿ ಚಲನಚಿತ್ರ ಛಾಯಾಗ್ರಾಹಕ ಸದಾಶಿವ ಹಿರೇಮಠ ಆಗಮಿಸಿ ಯಶಸ್ವಿ ವೆಬ್ ಸರಣಿಯನ್ನು ತಂಡ ನೀಡಿ ಮನೆಮಾತಾಗಲಿ ಎಂದು ಚಿತ್ರ ತಂಡಕ್ಕೆ ಶುಭ ಕೋ-ರಿದರು. ನಿರ್ದೇಶಕ ಕಲಿ ಮಾತನಾಡಿ ಈ ಹಿಂದೆಯೇ ಪ್ರೀತಿ-ಪ್ರೇಮ ಪುಸ್ತಕದ ಬದನೇಕಾಯಿ ಎಂದು. ಉಪೇಂದ್ರ ಹೇಳಿದ್ದರು. ಇವತ್ತಿನ ಘಟನೆಗಳೆಲ್ಲ ಅದು ಸತ್ಯ ಅನ್ನೋ ರೀತಿ ನಡಿತಾ ಇವೆ. ಪ್ರಸ್ತುತ ಸನ್ನಿವೇಶಗಳನ್ನಿಟ್ಟುಕೊಂಡು ಯುವ ಪೀಳಿಗೆಯ ಮೇಲೆ ಸಾಮಾಜಿಕ ಜಾಲತಾಣಗಳ ಪ್ರಭಾವ ಅದರಿಂದ ಏನಾಗುತ್ತಿದೆ, ಯುವ ಜನತೆ ಎತ್ತ ಸಾಗುತ್ತಿದೆ ಎಂಬುದನ್ನು ಈ ಸರಣಿಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ನಮ್ಮ ತಂಡ ಮಾಡುತ್ತೇವೆ. ಇದೆ ತಿಂಗಳು ಜು.19ರಿಂದ ಮೈಸೂರು ಸುತ್ತಮುತ್ತ ಚಿತ್ರೀಕರಣ ಆರಂಭಿಸಲಾಗುತ್ತಿದೆ ಎಂದರು. ಪಾತ್ರವರ್ಗದಲ್ಲಿ ಕಲಿ, ದಿಶಾ, ಪ್ರಿಯಾಂಕಾ, ಮಹೇಶ್, ರೋಹಿತ್, ಸಿದ್ದು, ರವಿ ಮೊದಲಾದ ಕಲಾವಿದರು ಅಭಿನಯಿಸುತ್ತಿದ್ದು ಛಾಯಾಗ್ರಹಣ ನಿರೀಕ್ಷಿತ್ ಟೀಮ್ , ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ, ಕಥೆ-ಚಿತ್ರಕಥೆ -ಸಂಭಾಷಣೆ ನಿರ್ದೇಶನ ಜವಾಬ್ದಾರಿ ಕಲಿ ಹೊತ್ತಿದ್ದು ನಿರ್ಮಾಪಕರು ಜಯಮ್ಮ ಕಾಂತರಾಜ್ ಆಗಿದ್ದಾರೆ.

-ಡಾ.ಪ್ರಭು ಗಂಜಿಹಾಳ

# ಸಿಂಧನೂರಿನಲ್ಲಿ ಅರ್ಥಪೂರ್ಣವಾಗಿ ಆಚರಿಸಲಾದ 'ವಿಶ್ವ ಜನಸಂಖ್ಯಾ ದಿನಾಚರಣೆ'

o ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ರಾಯಚೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ, ಸಿಂಧನೂರು ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಸಿಂಧನೂರು ಇವರ ಸಂಯುಕ್ತ ಆಶ್ರಯದಲ್ಲಿ "ವಿಶ್ವ ಜನಸಂಖ್ಯಾ ದಿನಾಚರಣೆ"ಯನ್ನು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಯಿತು.**



ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗಳಾದ ಡಾ. ಕಾವೇರಿ ಅವರು, "ಆರೋಗ್ಯಕರ ಸಮಯದಲ್ಲಿ ಗರ್ಭಧಾರಣೆ ಹಾಗೂ ಮಕ್ಕಳ ನಡುವಿನ ಆರೋಗ್ಯಕರ ಅಂತರ ಕಾಪಾಡುವುದ-ರಿಂದ ತಾಯಿ ಮತ್ತು ಮಕ್ಕಳ ಆರೋಗ್ಯ ವೃದ್ಧಿಸುತ್ತದೆ. ಇದರೊಂದಿಗೆ ಅನಗತ್ಯ ಗರ್ಭಧಾರಣೆಗಳನ್ನು ತಡೆಗಟ್ಟಬಹುದು" ಎಂದು ಘೋಷವಾಕ್ಯದೊಂದಿಗೆ ಜಾಗೃತಿ ಮೂಡಿಸಿದರು. ಮುಂದುವರೆದು ಮಾತನಾಡಿದ ಅವರು, "ಸ್ವಾತಂತ್ರ್ಯ ಬಂದಾಗ ದೇಶದ ಜನಸಂಖ್ಯೆ 33 ಕೋಟಿ ಇತ್ತು, ಆದರೆ ಇಂದು ಅದು 147 ಕೋಟಿ ತಲುಪಿದೆ. ಜನಸಂಖ್ಯೆಯ ಹೆಚ್ಚಳದಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಯುವಜನರು ಅರಿತುಕೊಳ್ಳುವುದು ಬಹಳ ಮುಖ್ಯ. ಕುಟುಂಬ ಕಲ್ಯಾಣ ವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಮತ್ತು ಹೆರಿಗೆಗಳ ನಡುವೆ ಸೂಕ್ತ ಅಂತರವನ್ನು ಕಾಯ್ದುಕೊಳ್ಳುವ ಮೂಲಕ ದೇಶದ ಜನಸಂಖ್ಯೆಯ ಸ್ಥಿರತೆಯನ್ನು ಕಾಪಾಡಲು ಯುವಕರ ಪಾತ್ರ ನಿರ್ಣಾಯಕವಾಗಿದೆ" ಎಂದು ತಿಳಿಸಿದರು. ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಗೀತಾ ಹಿರೇಮಠ ಅವರು ಮಾತನಾಡಿ, "ಯುವಜನರು ದೇಶದ ಆಸ್ತಿ. ಉತ್ತಮ ಮಾನಸಿಕ ಆರೋಗ್ಯಕ್ಕಾಗಿ ಮೊಬೈಲ್‌ನ ಅತಿಯಾದ ಬಳಕೆಯಿಂದ ದೂರವಿರಬೇಕು" ಎಂದು ಸಲಹೆ ನೀಡಿದರು.

ಸಣ್ಣ (ವಿಭಕ್ತ) ಕುಟುಂಬದ ಮಹತ್ವ ಹಾಗೂ ಹೆಚ್ಚು ಮಕ್ಕಳಿಂದ ಉಂಟಾಗುವ ಆರ್ಥಿಕ ಮತ್ತು ಆರೋಗ್ಯ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಲಾಯಿತು.ಪ್ರಾಥ-'ಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವ ಉಚಿತ ಗರ್ಭನಿರೋಧಕ ಮಾತ್ರೆಗಳು, ಕಾಂಡೊಮ್‌ಗಳು ಹಾಗೂ ಶಾಶ್ವತ ಸಂತಾನಹರಣ ಶಸ್ತ್ರಚಿಕಿತ್ಸೆಗಳ ಕುರಿತು ಮಾಹಿತಿ ನೀಡಲಾಯಿತು.ಗರ್ಭಿಣಿಯರಿಗೆ ಲಸಿಕೆ, ಪೌಷ್ಟಿಕ ಆಹಾರದ ಮಹತ್ವ ಮತ್ತು 18 ವರ್ಷದ ನಂತರವೇ ಮದುವೆಯಾಗುವ ಅಗತ್ಯತೆಯ ಬಗ್ಗೆ ಮನವರಿಕೆ ಮಾಡಿಕೊಡಲಾಯಿತು. ಮಕ್ಕಳ ನಡುವೆ ಕನಿಷ್ಠ ಮೂರು ವರ್ಷಗಳ ಅಂತರ ಕಾಯ್ದುಕೊಳ್ಳುವುದರಿಂದ ತಾಯಿ ಮತ್ತು ಮಗುವಿನ ಆರೋಗ್ಯವನ್ನು ಉತ್ತಮವಾಗಿಡಬಹುದು ಎಂದು ತಿಳಿಸಲಾಯಿತು.

ಈ ಕಾರ್ಯಕ್ರಮದಲ್ಲಿ ನಿರ್ಮಲ (ಎಫ್.ಡಬ್ಲ್ಯೂ ಕೌನ್ಸಲರ್), ಹಿರಿಯ ನರ್ಸಿಂಗ್ ಅಧಿಕಾರಿಗಳು, ನಿಂಗಮ್ಮ (ಪಿ.ಎಚ್.ಸಿ.ಒ), ನಬಿನಾ (ಎಚ್.ಐ.ಓ), ಪಾರ್ವತಿ (ಪಿ.ಎಚ್.ಸಿ.ಒ), ಆಶಾ ಕಾರ್ಯಕರ್ತೆಯರು ಹಾಗೂ ತಾಯಂದಿರು ಉಪಸ್ಥಿತರಿದ್ದರು.

# ಮಳೆಗಾಗಿ ಜೆಡಿಎಸ್ ಪಕ್ಷದಿಂದ ನೀರಮಾನ್ವಿ ರೇಣುಕಾ ಯಲ್ಲಮ್ಮ ದೇವಸ್ಥಾನಕ್ಕೆ ಪಾದಯಾತ್ರೆ

o ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಮಾನ್ವಿ ಪಟ್ಟಣದ ಕೋನಾಪುರ ಪೇಟೆ ಗ್ರಾಮದೇವತೆಯಾದ ಮಾರಿಕಾಂಬಾ ದೇವಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಮಾಜಿ ಸಚಿವ ವೆಂಕಟರಾವ್ ನಾಡಗೌಡ ರವರು ಮಳೆಗಾಗಿ ಜೆಡಿಎಸ್ ಪಕ್ಷದ ವತಿಯಿಂದ ಹಮ್ಮಿಕೊಂಡ ಪಾದಯಾತ್ರೆಗೆ ಚಾಲನೆ ನೀಡಿ.**



ಮಾತನಾಡಿ ಈ ವರ್ಷ ಮಳೆ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ ಈ ಭಾಗದ ರೈತರ ಹಾಗೂ ಜನರ ಜೀವನಾಡಿಯಾಗಿರುವ ತುಂಗಭದ್ರ ನದಿಯ ಒಡಲು ಬರಿದಾಗಿರುವುದರಿಂದ ಇಂದು ರೈತರು ಸಂಕಷ್ಟದಲ್ಲಿದ್ದಾರೆ ರೈತರು ಚೆನ್ನಾಗಿದ್ದರೆ ಮಾತ್ರ ನಾಡು ಸುಭಿಕ್ಷವಾಗಿರುತ್ತದೆ ಹಾಗೂ ಜನರಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವುದಕ್ಕೆ ಅಗತ್ಯ ನೀರು ದೊರೆಯುತ್ತದೆ ಅದ್ದರಿಂದ ರಾಜ್ಯದಲ್ಲಿ ಸಮೃದ್ದಿಯಾಗಿ ಮಳೆಯಾಗಿ ತುಂಗಭದ್ರ ಜಲಾಶಯ ತುಂಬಿದಲ್ಲಿ ಮಾತ್ರ ಈ ಭಾಗದ ಜನರ ಬದುಕು ಹಸನಾಗುತ್ತದೆ ಎನ್ನುವ ಉದ್ದೇಶದಿಂದ ಮಳೆಗಾಗಿ ಸಿಂಧನೂರಿನಿಂದ ಅಂಬಮಠದವರೆಗೆ ಜೆಡಿಎಸ್ ಪಕ್ಷದಿಂದ ಪಾದಯಾತ್ರೆಯನ್ನು ಕೈಗೊಳ್ಳಲಾಯಿತು ಮುಂದುವರೆದು ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ರವರ ನೇತೃತ್ವದಲ್ಲಿ ಇಂದು ಮಳೆಗಾಗಿ ಜೆಡಿಎಸ್ ಪಕ್ಷದಿಂದ ನೀರಮಾನ್ವಿ ಗ್ರಾಮದ ಗ್ರಾಮದೇವತೆ ಶ್ರೀ ರೇಣುಕ ಯಲ್ಲಮ್ಮ ದೇವಿ ದೇವಸ್ಥಾನದ ವರೆಗೆ ಪಾದಯಾತ್ರೆಯ ಮೂಲಕ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ನಾಡಿನ ಜನರಿಗಾಗಿ ರೈತರಿಗಾಗಿ ಮಳೆ ನೀಡುವಂತೆ ಪ್ರಾರ್ಥನೆ ಸಲ್ಲಿಸಲಾಗುವುದು ಎಂದು ತಿಳಿಸಿದರು. ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಮಾತನಾಡಿ ತಾಲೂಕಿನಲ್ಲಿ ಕಳೆದ 2 ತಿಂಗಳಿಂದ ಸಮರ್ಪಕವಾಗಿ ಮುಂಗಾರು ಮಳೆಯಾಗದೆ ಇರುವುದರಿಂದ ಬರಗಾಲದ ಪರಿಸ್ಥಿತಿ ಉಂಟಾಗಿದೆ. ರೈತರು ತೀವ್ರವಾದ ಸಂಕಷ್ಟದಲ್ಲಿ ಇದ್ದರೆ.ಮಳೆ ಇಲ್ಲದೆ ಬೆಳೆ ಒಣಗುತ್ತಿದೆ. ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿಗು ಕೂಡ ತೊಂದರೆಯಾಗಿರುವುದ-ರಿಂದ ಮಾನ್ವಿ ಜನತಾದಳ ಜಾತ್ಯತೀತ ಪಕ್ಷದ ವತಿಯಿಂದ ಲೋಕಕಲ್ಯಾಣಕ್ಕಾಗಿ ಹಾಗೂ ಮಳೆ ,ಬೆಳೆ ,ಸಮೃದ್ದಿಗಾಗಿ ತಾಲೂಕಿನ ಶಕ್ತಿದೇವತೆಯಾದ ನೀರಮಾನ್ವಿ ಗ್ರಾಮದ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದ ವರೆಗೆ ಪಾದಯಾತ್ರೆಯ ಮೂಲಕ ತೆರಳಿ ವಿಶೇಷವಾದ ಪೂಜೆಯನ್ನು ಸಲ್ಲಿಸಿ ಮಳೆಗಾಗಿ ದೇವಿಯಲ್ಲಿ ಬೇಡಲಾಗುವುದು ಎಂದು ತಿಳಿಸಿದರು.

ಜನತಾದಳ ಜಾತ್ಯತೀತ ಪಕ್ಷದ ಸಾವಿರಾರು ಕಾರ್ಯಕರ್ತರು ಮಳೆಗಾಗಿ ಚೌಡೇಶ್ವರಿ ದೇವಿ ದೇವಸ್ಥಾನ, ಕಚೇರಿ ಆಂಜನೇಯ್ಯ ದೇವಸ್ಥಾನ, ಶ್ರೀ ಮಹಾಲಕ್ಷ್ಮಿ ?ಮೀ ದೇವಸ್ಥಾನಗಳಲ್ಲಿ ವಿಶೇಷವಾದ ಪೂಜೆಯನ್ನು ಸಲ್ಲಿಸಿ ಮಾನ್ವಿಯಿಂದ ನೀರಮಾನ್ವಿ ಗ್ರಾಮದ ವರೆಗೆ ಪಾದಯಾತ್ರೆ ಮೂಲಕ ತೆರಳಿ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.


,ಪಾದಯಾತ್ರೆಯಲ್ಲಿ ಭಜನ ಮಂಡಳಿಯವರು ಶಿವನ ಕುರಿತು ಭಜನೆ ಹಾಡುಗಳನ್ನು ಹಾಡಿದರೆ ಗ್ರಾಮೀಣ ಭಾಗದ ಮಹಿಳೆಯರು ಜನಪದ ಮಳೆ ಹಾಡುಗಳನ್ನು ಹಾಡಿದರು. ಮಾನ್ವಿ ಮತ್ತು ಸಿರವಾರ ತಾಲೂಕುಗಳ ಜೆಡಿಎಸ್ ಕಾರ್ಯಕರ್ತರು. ರೈತ ಮೋರ್ಚ,ಮಹಿಳಾ ಘಟಕದ ಪದಾಧಿಕಾರಿಗಳು ಸೇರಿದಂತೆ ಸಾವಿರಾರು ಜನರು ಪಾದಯಾತ್ರೆಯಲ್ಲಿ ಭಾಗವಹಿಸಿದರು.

ರಾಜ್ಯ ಜೆಡಿಎಸ್ ಯುವ ಘಟಕದ ಉಪಾಧ್ಯಕ್ಷರಾದ ರಾಜಾ ರಾಮಚಂದ್ರನಾಯಕ, ಮಾನ್ವಿ ಜೆಡಿಎಸ್ ಪಕ್ಷದ ಅಧ್ಯಕ್ಷರಾದ ಈರಣ್ಣ ಮರ್ಲಾಟ್ಟಿ, ಸಿರವಾರ ಜೆಡಿಎಸ್ ಪಕ್ಷದ ಅಧ್ಯಕ್ಷರಾದ ಟಿ.ಮಲ್ಲಿಕಾರ್ಜುನಪಾಟೀಲ್ ಬಲ್ಲಟಗಿ, ನಗರ ಘಟಕದ ಅಧ್ಯಕ್ಷರಾದ ಹೆಚ್. ಮೌನೇಶ್ ಗೌಡ, ರೈತ ಘಟಕದ ಅಧ್ಯಕ್ಷರಾದ ಶರಣಪ್ಪಗೌಡ, ಮದ್ಲಾಪುರ್,ಮುಖಂಡರಾದ ಬಾಷಸಾಬ್ ಸೇರಿದಂತೆ ಇನ್ನಿತರರು ಇದ್ದರು.

# ಹಟ್ಟಿ ಚಿನ್ನದ ಗಣಿ ಕಂಪನಿ ವಿರುದ್ಧ ರೈತರ ಆಕ್ರೋಶ: ಬೇಡಿಕೆ ಈಡೇರದಿದ್ದರೆ ಜುಲೈ 27ರಿಂದ ಉಪವಾಸ ಸತ್ಯಾಗ್ರಹಕ್ಕೆ ಕರೆ

o ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಜು 18 - ಹಟ್ಟಿ ಮತ್ತು ಕೋಠ ಸೀಮಾಂತರದ ವ್ಯಾಪ್ತಿಯಲ್ಲಿ ಬರುವ 1309 ಎಕರೆ ಗಣಿ ಗುತ್ತಿಗೆಯಲ್ಲಿ 915 ಎಕರೆ ಭೂಸ್ವಾಧೀನ ಮಾಡಿಕೊಂಡು ಉದ್ಯೋಗ ಮತ್ತು ಪರಿಹಾರ ನೀಡಿದ್ದೀರಿ ಇನ್ನೂಳಿದ 390 ಎಕರೆ ರೈತರ ಪಟ್ಟಾ ಜಮೀನನ್ನು ಭೂಸ್ವಾಧೀನವಾಗಿದೆ ಹಟ್ಟಿ ಚಿನ್ನದ ಗಣಿ ಕಂಪನಿ ಇಸಿಯಲ್ಲಿ ನೊಂದಾಯಿಸಿಕೊಂಡಿರುವ ರೈತರ ಪಟ್ಟಾ ಜಮೀನನ್ನು ಭೂಸ್ವಾಧೀನ ಮಾಡಿಕೊಂಡಿದ್ದೀರಿ ಎಂದು ಆರೋಪಿಸಿ ಭೂ ಹಕ್ಕು ವಂಚಿತ ರೈತ ಹೋರಾಟ ಸಮಿತಿ ಅಧ್ಯಕ್ಷ ಬಾಬು ನಾಯಿಕೋಡಿ ಸಹಾಯಕ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿದರು .**



ಭೂ ವಂಚಿತರಿಗೆ ಉದ್ಯೋಗ, ಪರಿಹಾರ ಮತ್ತು ನಷ್ಟ ಭರಿಸುವ ವಿಷಯವಾಗಿ ಸರ್ಕಾರದ ವಿವಿಧ ಇಲಾಖೆಯ ಅಧಿಕಾ-ರಿಗಳೊಂದಿಗೆ ಮತ್ತು ರೈತ ಪ್ರತಿನಿಧಿಗಳೊಂದಿಗೆ ಹಲವಾರು ಬಾರಿ ಸಭೆ ಜರುಗಿಸಿ ರೈತರ ಸಮಸ್ಯೆಗಳನ್ನು ಸುಧೀರ್ಘವಾಗಿ ಚರ್ಚಿಸಲಾಗಿದ್ದು ಕಂಪನಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ 15-04-2026 ರ ನಂತರ ಸಭೆ ನಡೆಸಿ ತಿಳಿಸಿರುವುದ-ರಿಂದ ದಿನಾಂಕ 13-04-2026 ರ ಉದ್ದೇಶಿತ ಉಪವಾಸ ಸತ್ಯಾಗ್ರಹ ಹೋರಾಟವನ್ನು ಕೈಬಿಟ್ಟು ಸೌಹರ್ದವಾಗಿ ಚರ್ಚಿಸಿ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ಉಲ್ಲೇಖಿತ ಪತ್ರ 2 ರಲ್ಲಿ ತಿಳಿಸಲಾಗಿತ್ತು.

23-04-2026 ರಂದು ಕಂಪನಿಯ ಅಧಿಕೃತ ಕಚೇರಿಯಲಿ ಕಂಪನಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪೂರ ಮತ್ತು ರೈತ ಪ್ರತಿನಿಧಿಗಳೊಂದಿಗೆ ಹಾಗೂ ಕಂಪನಿಯ ಅಧಿಕಾರಿಗಳೊಂದಿಗೆ ವ್ಯವಸ್ಥಾಪಕ ನಿರ್ದೇಶಕರ ಸಮ್ಮುಖದಲ್ಲಿ ಸಭೆ ಜರುಗಿದ್ದು, ಸದರಿ ಸಭೆಯಲ್ಲಿ ಚರ್ಚಿಸಿದಂತೆ ಸರಕಾರದಿಂದ ಕಂಪನಿಗೆ ಗಣಿ ಗುತ್ತಿಗೆ ಪಡೆದ ರೈತರ ಜಮೀನುಗಳ ಇಸಿಯಲ್ಲಿ ನಮೂದಿಯಾಗಿರುವ ಕಂಪನಿಯ ಹೆಸರನ್ನು ತೆಗೆದುಹಾಕುವುದು ಹಾಗೂ ಗಣಿ ಗುತ್ತಿಗೆಯ 390 ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಂಡು ಉದ್ಯೋಗ ಮತ್ತು ಪರಿಹಾರ ಹಾಗೂ ಇಲ್ಲಿಯವರೆಗೆ ರೈತರಿಗೆ ಆಗಿರುವ ನಷ್ಟ ಭರಿಸುವ ಬಗ್ಗೆ ದಿನಾಂಕ 23-07-2026 ರ ಒಳಗಡೆ ಸೂಕ್ತ ತೀರ್ಮಾನ ಮಾಡುವ ಬಗ್ಗೆ ಲಿಖಿತ ಭರವಸೆ ನೀಡಿದ್ದರೂ ಇಲ್ಲಿಯವರೆಗೆ ಯಾವುದೇ ಸೂಕ್ತ ಕ್ರಮ ಕೈಗೊಳ್ಳದೆ ಕಾಲಾಹರಣ ಮಾಡುತ್ತ ರೈತರ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿರುವುದರಿಂದ ನೀವೂ ನೀಡಿದ ಲಿಖಿತ ಭರವಸೆ ಅವಧಿಯೊಳಗೆ ಸೂಕ್ತ ತೀರ್ಮಾನ ಮಾಡದಿದ್ದರೆ ತಾತ್ಕಲಿಕವಾಗಿ ಮುಂದೂಡಿದ್ದ ಉಪವಾಸ ಸತ್ಯಾಗ್ರಹವನ್ನು ಪುನಃ ದಿನಾಂಕ 27-07-2026 ರಂದು ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪೂರ ಅವರ ನೇತೃತ್ವದಲ್ಲಿ ಕಂಪನಿಯ ಮುಖ್ಯದ್ವಾರದ ಮುಂದೆ ಸರದಿ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು.

ಮುಂದೆ ಆಗುವ ಅನಾಹುತಗಳಿಗೆ ಸರಕಾರ ಮತ್ತು ಕಂಪನಿಯ ಅಧಿಕಾರಿಗಳು ನೇರವಾಗಿ ಹೊಣೆಗಾರರಾಗುತ್ತೀರಿ ಎಂದು ಹೇಳಿದರು . ಈ ಸಂದರ್ಭದಲ್ಲಿ ಭೂಹಕ್ಕು ವಂಚಿತ ರೈತ ಹೋರಾಟ ಸಮಿತಿ ಉಪಾಧ್ಯಕ್ಷ ಕೆ. ಶಿವಾನಂದ್ , ಪ್ರಧಾನ ಕಾರ್ಯದರ್ಶಿ ಶಿವಪುತ್ರಪ್ಪ ಹಟ್ಟಿ , ಕಾರ್ಯಧ್ಯಕ್ಷ ಸುರೇಶ ಗೌಡ ಸೇರಿದಂತೆ ಇತರರು ಇದ್ದರು .

# ಜವಳಗೇರಾ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಯಶಸ್ವಿಯಾಗಿ ಜರುಗಿದ ಶಾಲಾ ಸಂಸತ್ ಚುನಾವಣೆ: ಪ್ರಜಾಪ್ರಭುತ್ವದ ಮಾದರಿ ಮತದಾನ

o ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಜವಳಗೇರಾ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 2026-27ನೇ ಸಾಲಿನ "ಶಾಲಾ ಸಂಸತ್ ಚುನಾವಣೆ"ಯನ್ನು ಅತ್ಯಂತ ಸಡಗರ ಹಾಗೂ ಶಿಸ್ತುಬದ್ಧವಾಗಿ ಹಮ್ಮಿಕೊಳ್ಳಲಾಗಿತ್ತು.ದಿನಾಂಕ 17/07/2026 ರಂದು ಬೆಳಿಗ್ಗೆ 10:00 ಗಂಟೆಗೆ ಶಾಲಾ ಆವರಣದಲ್ಲಿ ಚುನಾವಣೆ ಪ್ರಕ್ರಿಯೆ ಆರಂಭವಾಯಿತು. ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು, ಸಂವಿಧಾನದ ಆಶಯಗಳು ಮತ್ತು ಮತದಾನದ ಮಹತ್ವವನ್ನು ಮೂಡಿಸುವ ನಿಟ್ಟಿನಲ್ಲಿ ಈ ಚುನಾವಣೆಯನ್ನು ಆಯೋಜಿಸಲಾಗಿತ್ತು. ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸಿ, ತಮ್ಮ ಗುರುತಿನ ಚೀಟಿಯನ್ನು**



**ತೋರಿಸಿ ಪ್ರಜಾಪ್ರಭುತ್ವದ ಮಾದರಿಯಲ್ಲಿ ಶೇ. 100 ರಷ್ಟು ಶಾಂತಿಯುತ ಮತದಾನ ಮಾಡಿದರು.ಈ ಸಂದರ್ಭದಲ್ಲಿ ಮುಖ್ಯ ಚುನಾವಣಾ ಅಧಿಕಾರಿಯಾಗಿ ಶಾಲೆಯ ಪ್ರಾಂಶುಪಾಲರಾದ ಶ್ರೀ ಮೌಲಾಲಿ ದೊಡ್ಡಮನಿಅವರು ಕಾರ್ಯನಿರ್ವಹಿಸಿದರು. ಕಾರ್ಯಕ್ರಮದ ಉಸ್ತುವಾರಿಯನ್ನು ಡಿ.ಬಿ.ಆರ್. ಎಸ್ (ಆಃಖಖ) ಶಾಲೆಯ ಪ್ರಾಂಶುಪಾಲರಾದ ಶ್ರೀ ಚನ್ನಬಸಪ್ಪ ಅವರು ವಹಿಸಿಕೊಂಡಿದ್ದರು.ಚುನಾವಣಾ ಪ್ರಕ್ರಿಯೆಯನ್ನು ಯಶಸ್ವಿಗೊಳಿಸಲು ಶಾಲೆಯ ಶಿಕ್ಷಕ ವೃಂದದವರಾದ ಶ್ರೀ ರತೀಂದ್ರ ರಾಯ್ (ಹಿಂದಿ ಶಿಕ್ಷಕರು), ಶ್ರೀ ದುರುಗಪ್ಪ (ಚಿತ್ರಕಲೆ), ಶ್ರೀ ಮೌನೇಶ್(ದೈಹಿಕ ಶಿಕ್ಷಣ ಶಿಕ್ಷಕರು), ಶ್ರೀ ಹನುಮೇಶ್ ಗಣಕಯಂತ್ರ ಶಿಕ್ಷಕರು ಶ್ರೀ ಆಂಜನೇಯ (ಕನ್ನಡ), ಶ್ರೀ ಅರುಣ್ ಕುಮಾರ್ (ಆಂಗ್ಲ ಭಾಷೆ), ಯೂಸುಫ್ ಸಾಬ್ ಸಮಾಜ ವಿಜ್ಞಾನ ಶಿಕ್ಷಕ. ಶ್ರೀ ದೇವಪ್ಪ ನಿಲಯ ಪಾಲಕರು ಶ್ರೀ ಸಣ್ಣ ಹುಸೇನಪ್ಪಾ (ಗಣಿತ ಶಿಕ್ಷಕರು).ಶ್ರೀ ವಿಜಯ್ ಕುಮಾರ್ ಈಆಂ . ಶ್ರೀ ಮತಿ ಗೀತಾಂಜಲಿ ಸ್ಟಾಫ್ ನರ್ಸ್ ಮತ್ತು ಕುಮಾರಿ ಶಕುಂತಲಾ (ವಿಜ್ಞಾನ) ಅವರು ಸಕ್ರಿಯವಾಗಿ ಶ್ರಮಿಸಿದರು.ಇವರೊಂದಿಗೆ ಡಿ.ಬಿ.ಆರ್.ಎಸ್ ಶಾಲೆಯ ಸಿಬ್ಬಂದಿಗಳಾದ ಶ್ರೀ ವೆಂಕಟೇಶ್ (ಹಿಂದಿ ಶಿಕ್ಷಕರು) ಶ್ರೀ ಗಣೇಶ ಇಂಗ್ಲಿಷ್ ಶಿಕ್ಷಕರು.ಶ್ರೀನಾಗರಾಜ ದೈಹಿಕ ಶಿಕ್ಷಣ ಶಿಕ್ಷಕರು.ಕುಮಾರಿ ಮಹಿಮುನ್ನ ಕನ್ನಡ ಶಿಕ್ಷಕಿ , ಕುಮಾರಿ ಗುರುಲಿಂಗಮ್ಮ ವಿಜ್ಞಾನ ಶಿಕ್ಷಕಿ., ಶ್ರೀಮತಿ ದುರ್ಗಾದೇವಿ ಈಆಂ.ಶ್ರೀಮತಿ ವೀಣಾ ಸ್ಟಾಫ್ ನರ್ಸ್.ಸೇರಿದಂತೆ ಹಾಗೂ ಶಾಲೆಯ ಎಲ್ಲಾ 6 ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಶಾಲೆಯಲ್ಲಿ ಒಟ್ಟು 11 ಖಾತೆಗಳಿಗೆ ಚುನಾವಣೆ ನಡೆಸಲಾಯಿತು.**

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಹೋಟೆಲ್ ಮತ್ತು ಪ್ರವಾಸೋದ್ಯಮ (Hotel & Tourism)

ಹೋಟೆಲ್ ಮತ್ತು ಪ್ರವಾಸೋದ್ಯಮ (Hotel & Tourism) ಕೋರ್ಸ್‌ಗಳು ವೇಗವಾಗಿ ಬೆಳೆಯುತ್ತಿರುವ ಆತಿಥ್ಯ ಉದ್ಯಮದಲ್ಲಿ ಅತ್ಯುತ್ತಮ ಉದ್ಯೋಗಾವಕಾಶಗಳನ್ನು ನೀಡುತ್ತವೆ. 10ನೇ ಅಥ–ವಾ ಪಿಯುಸಿ ಉತ್ತೀರ್ಣರಾದ ನಂತರ ಡಿಪ್ಲೊಮಾ, ಪದವಿ (B.Sc, BBA) ಮತ್ತು ಸ್ನಾತಕೋತ್ತರ ಪದವಿ (MBA) ಕೋರ್ಸ್‌ಗಳನ್ನು ಮಾಡಬಹುದು. ಶುಲ್ಕವು ಸಾಮಾನ್ಯವಾಗಿ ವಾರ್ಷಿಕ ?1 ಲಕ್ಷದಿಂದ ?15 ಲಕ್ಷದವರೆಗೆ ಇರುತ್ತದೆ.ಕೋಚಿಂಗ್ ವಿಧಗಳು ಮತ್ತು ಅವಧಿಡಿಪ್ಲೊಮಾ ಕೋರ್ಸ್‌ಗಳು (Diploma Courses): 1 ರಿಂದ 2 ವರ್ಷಗಳ ಅವಧಿ. ಹೋಟೆಲ್ ಮ್ಯಾನೇಜ್‌ಮೆಂಟ್ ಅಥ–ವಾ ಟ್ರಾವೆಲ್ & ಟೂರಿಸಂನಲ್ಲಿ ಮೂಲಭೂತ ಕೌಶಲ್ಯಗಳನ್ನು ಕಲಿಸಲಾಗುತ್ತದೆ.ಪದವಿ ಕೋರ್ಸ್‌ಗಳು (UG Degrees): 3 ರಿಂದ 4 ವರ್ಷಗಳ ಅವಧಿ (ಉದಾಹರಣೆಗೆ: B.Sc. in Hotel Management, BBA in Hospitality and Tourism).ಸ್ನಾತಕೋತ್ತರ ಪದವಿಗಳು (PG Degrees): 2 ವರ್ಷಗಳ ಅವಧಿ (GzÁªÀgÀuÉUÉ: MBA in Tourism Management CxÀªÁ Hotel Management).ಪ್ರಮುಖ ವಿಷಯಗಳು (Subjects Taught)ಫ್ರಂಟ್ ಆಫೀಸ್ ಮ್ಯಾನೇಜ್‌ಮೆಂಟ್: ಹೋಟೆಲ್‌ಗೆ ಬರುವ ಅತಿಥಿಗಳ ಸ್ವಾಗತ ಮತ್ತು ನಿರ್ವಹಣೆ.ಆಹಾರ ಮತ್ತು ಪಾನೀಯ ನಿರ್ವಹಣೆ (Food & Beverage): ಅಡುಗೆ ತಯಾರಿ, ಬೇಕಿಂಗ್ ಮತ್ತು ಬಡಿಸುವ ಕಲೆ. ಹೌಸ್‌ಕೀಪಿಂಗ್ (Housekeeping): ಕೊಠಡಿಗಳ ನಿರ್ವಹಣೆ ಮತ್ತು ಶುಚಿತ್ವ.ಪ್ರವಾಸೋದ್ಯಮ ನಿರ್ವಹಣೆ (Tourism Management): ಟೂರ್ ಆಪರೇಟರ್ ಕೆಲಸಗಳು, ಟಿಕೆಟ್ ಬುಕಿಂಗ್ ಮತ್ತು ಸ್ಥಳಗಳ ಮಾಹಿತಿ.ಅರ್ಹತೆ ಮತ್ತು ಪ್ರವೇಶ ಪರೀಕ್ಷೆಅರ್ಹತೆ: ಯಾವುದೇ ವಿಭಾಗದಲ್ಲಿ (ವಿಜ್ಞಾನ, ಕಲೆ, ವಾಣಿಜ್ಯ) 10+2 ಅಥವಾ ದ್ವಿತೀಯ ಪಿಯುಸಿ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.ಪ್ರವೇಶ ಪರೀಕ್ಷೆಗಳು: ಎನ್‌ಸಿಎಚ್‌ಎಂಸಿಟಿ ಜೆಇಇ (NCHMCT JEE), ಕ್ಯುಟ್ (CUET), ಅಥವಾ ಆಯಾ ರಾಜ್ಯದ ವಿಶ್ವವಿದ್ಯಾಲಯಗಳ ಪರೀಕ್ಷೆಗಳ ಮೂಲಕ ಪ್ರವೇಶ ಪಡೆಯಬಹುದು.ಉದ್ಯೋಗಾವಕಾಶಗಳುಕೋರ್ಸ್ ಮುಗಿದ ನಂತರ ಲಭ್ಯವಿರುವ ಕೆಲವು ಮುಖ್ಯ ಉದ್ಯೋಗಗಳು:ಹೋಟೆಲ್ ಮ್ಯಾನೇಜರ್ (Hotel Manager)ಟ್ರಾವೆಲ್ ಏಜೆಂಟ್ ಅಥವಾ ಟೂರ್ ಮ್ಯಾನೇಜರ್ಈವೆಂಟ್ ಮ್ಯಾನೇಜರ್ (Event Manager)ಏರ್ಲೈನ್ ಕ್ಯಾಬಿನ್ ಸಿಬ್ಬಂದಿ ಅಥವಾ ಗ್ರೌಂಡ್ ಸ್ಟಾಫ್ರಿಸಾರ್ಟ್ ನಿರ್ದೇಶಕಪ್ರಮುಖ ನೇಮಕಾತಿದಾರರು (Top Recruiters)ದಿ ತಾಜ್ ಗ್ರೂಪ್ (The Taj Group), ಮ್ಯಾರಿಯೊಟ್ (Marriott International), ಹಯಾತ್ (Hyatt Hotels), ಐಟಿಸಿ ಗ್ರೂಪ್ (ITC Group) ಮತ್ತು ಪ್ರಮುಖ ಟ್ರಾವೆಲ್ ಏಜೆನ್ಸಿಗಳು.ವಿವಿಧ ಕೋರ್ಸ್‌ಗಳು ಮತ್ತು ಕಾಲೇಜುಗಳ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಯಲು:ಶಿಕ್ಷಣ ಮತ್ತು ಉದ್ಯೋಗದ ಪೂರ್ಣ ವಿವರಗಳಿಗಾಗಿ Shiksha Hotel Management ವೆಬ್‌ಸೈಟ್ ಪರಿಶೀಲಿಸಿ.ಪ್ರವಾಸೋದ್ಯಮ ಕೋರ್ಸ್‌ಗಳ ಬಗ್ಗೆ ತಿಳಿಯಲು College-Dekho ವೆಬ್‌ಸೈಟ್ ನೋಡಿ.




# ಶ್ರೀ ವಿದ್ಯಾ ಭಾರತಿ ಸಂಸ್ಥೆಯಲ್ಲಿ ಅಕ್ಷರ ಅಭ್ಯಾಸ ಕಾರ್ಯಕ್ರಮ

## ಓದುವ ಅಭ್ಯಾಸ ಮತ್ತು ಸಂಸ್ಕಾರದಿಂದ ಮಾತ್ರ ಉತ್ತಮ ಸಮಾಜ ನಿರ್ಮಾಣ – ಶ್ವೇತಾ ಎಸ್ ಪಲ್ಲೇದ್

ೞ ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಬಿ.ಗಣೇಕಲ್ ಗ್ರಾಮದ ಶ್ರೀ ವಿದ್ಯಾ ಭಾರತಿ ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳಿಗೆ ಶಿಕ್ಷಣದ ಮಹತ್ವ ಮತ್ತು ಅಕ್ಷರ ಜ್ಞಾನದ ಬೆಳಕು ಮೂಡಿಸುವ ಉದ್ದೇಶದಿಂದ "ಅಕ್ಷರ ಅಭ್ಯಾಸ ಕಾರ್ಯಕ್ರಮ"ವನ್ನು ಗಣಪತಿ ಮತ್ತು ಸರಸ್ವತಿ ದೇವಿಗೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಲಾಯಿತು.**

ಕಾರ್ಯಕ್ರಮದ ವೇದಿಕೆಯನ್ನು ಬಣ್ಣ ಬಣ್ಣದ ಹೂವಿನ ಹಾರಗಳು, ಸ್ವಸ್ತಿಕ್, ಓಂ ಚಿಹ್ನೆ ಮತ್ತು ಶ್ರೀ ಗಣಪತಿ, ಶ್ರೀ ಸರಸ್ವತಿ ದೇವಿಯ ಭಾವಚಿತ್ರದಿಂದ ಶಿಕ್ಷಕರು ಅಲಂಕರಿಸಿದರು. "ಸಂಸ್ಕಾರ ಮತ್ತು ಅಕ್ಷರವೇ ಅಮೂಲ್ಯ ಸಂಪತ್ತು, ವಿದ್ಯೆಯೇ ಶಾಶ್ವತ ಧನ" ಎಂಬ ಫಲಕವು



ಕಾರ್ಯಕ್ರಮದ ಆಶಯವನ್ನು ಎತ್ತಿ ತೋರಿಸಿತು.

ಕಾರ್ಯಕ್ರಮದ ಆರಂಭದಲ್ಲಿ ಪೂಜ್ಯ ಸಿದ್ದರಾಮಯ್ಯ ಸ್ವಾಮಿ ಗಣಜಲಿ ವಿದ್ಯಾರ್ಥಿಗಳಿಗೆ "ಶ್ರೀ ಗಣೇಶಾಯ ನಮಃ, ಶ್ರೀ ಗುರುಭ್ಯೋ ನಮಃ, ಶ್ರೀ ಸರಸ್ವತ್ಯೈ ನಮಃ" ಎಂಬ ಪ್ರಾಥ–ರ್ನಾ ಶ್ಲೋಕಗಳನ್ನು ಪಠಿಸಿದರು. ತಾಯಿಯೇ ಮೊದಲ ಗುರು ಆ ಗುರುವಿನಿಂದ ಅಕ್ಕಿಯಲ್ಲಿ "ಓಂ, ಶ್ರೀ, ಮತ್ತು ಅಮ್ಮ" ಎಂಬ ಅಕ್ಷರದಿಂದ



ಮಗುವಿನ ಕೈ ಹಿಡಿದು ಬರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶ್ವೇತಾ ಪಲ್ಲೇದ್, "ಮಗುವಿನ ಭವಿಷ್ಯದ ಅಡಿಪಾಯವೇ ಅಕ್ಷರ. ಓದುವ ಅಭ್ಯಾಸ ಮತ್ತು ಸಂಸ್ಕಾರದಿಂದ ಮಾತ್ರ ನಾವು ಉತ್ತಮ ಸಮಾಜವನ್ನು ನಿರ್ಮಿಸಲು ಸಾಧ್ಯ. ಪೋಷಕರು ತಮ್ಮ ಮಕ್ಕಳನ್ನು ಪ್ರತಿದಿನ ಅಜ್ಜ–ಅಜ್ಜಿಗೆ, ಹಿರಿಯರಿಗೆ ನಮಸ್ಕರಿಸುವುದನ್ನು ಕಲಿಸಬೇಕು, ಮಗುವಿನ ಆರೋಗ್ಯದ ಬಗ್ಗೆ ಪಾಲಕರು ಗಮನಹರಿಸಿ ಬೇಕು, ಮಗುವಿಗೆ ಕಲಿಕೆಯ ಸಮಸ್ಯೆಗಳು ಇದ್ದರೆ ನೇರವಾಗಿ ಶಿಕ್ಷಕರನ್ನು ಸಂಪರ್ಕಿಸಿ ಮತ್ತು ಬೇರೆ ಮಗುವಿನ ಜೊತೆ ತಮ್ಮ ಮಗುವನ್ನು ಹೋಲಿಕೆ ಮಾಡಬಾರದು, ಓದಲು ಪ್ರೋತ್ಸಾಹಿಸಬೇಕು" ಎಂದು ಕರೆ ನೀಡಿದರು.


"ಪ್ರತಿ ವರ್ಷವು ಮಕ್ಕಳಿಗೆ ಸರಸ್ವತಿ ದೇವಿ ವಿದ್ಯಾಭ್ಯಾಸ ಕರುಣಿಸಲಿ" ಎಂಬ ಸಂದೇಶದೊಂದಿಗೆ ನಮ್ಮ ಸಂಸ್ಥೆಯಲ್ಲಿ ಹೊಸದಾಗಿ ದಾಖಲಾದ ಪೂರ್ವ ಪ್ರಾಥಮಿಕ ಶಾಲೆ ಮಕ್ಕಳಿಗೆ ಅಕ್ಷರ ಅಭ್ಯಾಸ ಕಾರ್ಯಕ್ರಮ ನಡೆಸಿ ಕೊಂಡು ಬರುತ್ತಿದ್ದೇವೆ. ಎಲ್ಲಾ ತಾಯಂದಿರು ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಿ ಮತ್ತು ವಿದ್ಯಾಭ್ಯಾಸ ನೀಡಿ ಎಂದು ಸಂಸ್ಥೆಯ ಅಧ್ಯಕ್ಷರಾದ ಹಂಪಣ್ಣ ಪಲ್ಲೇದ್ ತಿಳಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರು ಭಾಗವಹಿಸಿದ್ದರು.

# "ಮೈಗಳ್ಳ ಅಧಿಕಾರಿಗಳಿಂದ ನ್ಯಾಯಕ್ಕಾಗಿ ರೈತನ 15 ವರ್ಷ ಅಲೆದಾಟ"

ೞ ನೈಜ್ಯ ದೆಸೆ ನ್ಯೂಸ್

**ಮಸ್ಕಿ: "ರೈತ ದೇಶದ ಬೆನ್ನೆಲುಬು" ಎನ್ನಲಾಗುವ ಗಾದೆಯಂತೆ ರೈತರಿಗೆ ಪ್ರಕೃತಿ ವಿಕೋಪ ಒಂದೆಡೆ, ಮತ್ತೊಂದೆಡೆ ಆಡಳಿತಾತ್ಮಕ ನಿರ್ಲಕ್ಷ್ಯವೂ ರೈತ–ರಿಗೆ ಸಂಕಷ್ಟದ ಸರಪಳಿಯಾಗಿವೆ. ಅಧಿಕಾರಿಗಳ ಕಡತಗಳ ನಡುವೆ ಸಿಲುಕಿರುವ ರೈತರ ಬದುಕು ನರಕಯಾತನೆ ಆಗುತ್ತಿರುವುದಕ್ಕೆ ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಬಳಗಾನೂರು ಗ್ರಾಮದ ರೈತ ಮಹಿಳೆ ಗಂಗಮ್ಮ ಗಂಡ ಈರಪ್ಪ ಅವರ ಕುಟುಂಬವೇ ಜೀವಂತ ಉದಾಹರಣೆಯಾಗಿದೆ.**

ಬಳಗಾನೂರು ವ್ಯಾಪ್ತಿಯ ನಾರಾಯಣನಗರ ಕ್ಯಾಂಪ್‌ನ ಸರ್ವೆ ನಂ.96ರಲ್ಲಿ ಗಂಗಮ್ಮ ಅವರ ಹೆಸರಿನ 3 ಎಕರೆ 32 ಗುಂಟೆ ಜಮೀನಿದೆ. ಕುಟುಂಬದ ಆರೋಪದ ಪ್ರಕಾರ 2004ರಲ್ಲಿ 10ಗುಂಟೆ ಹಾಗೂ 2017ರಲ್ಲಿ ಮತ್ತೊಮ್ಮೆ 10 ಗುಂಟೆ ಜಮೀನನ್ನು ಪೂಟ್ ಖರಾಬ್ ಎಂದು ದಾಖಲಿಸಿ ಒಟ್ಟು 20 ಗುಂಟೆ ಕಡಿತಗೊಳಿಸಲಾಗಿದೆ. ಇದರಿಂದ ಪಹಣಿಯಲ್ಲಿ ಈಗಾಗಲೇ 3 ಎಕರೆ 12 ಗುಂಟೆ ಜಮೀನು ಮಾತ್ರ ಉಳಿದಿದೆ. ಇದೀಗ ಜಮೀನಿನ ಪೌಡಿ (ಸರ್ವೆ) ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದಾಗ ಮತ್ತೊಮ್ಮೆ 19 ಗುಂಟೆ ಪೂಟ್ ಖರಾಬ್ ಎಂದು ದಾಖಲಿಸಬೇಕೆಂದು ಅಧಿಕಾರಿಗಳು ಹೇಳುತ್ತಿದ್ದಾರೆ ಎಂದು ಕುಟುಂಬ ಆರೋಪಿಸಿದೆ.



ಈ ಕುರಿತು ಮಾತನಾಡಿದ ಗಂಗಮ್ಮ ಅವರ ಪುತ್ರ ಅಮರೇಶ ಈಗಾಗಲೇ 20 ಗುಂಟೆ ಜಮೀನು ಕಡಿತವಾಗಿದೆ, ಮತ್ತೆ 19 ಗುಂಟೆ ತೆಗೆದರೆ ನಾವು ಬದುಕುವುದಾದರೂ ಹೇಗೆ ? ಇದು ಯಾವ ನ್ಯಾಯ? ಎಂದು ಪ್ರಶ್ನಿಸಿದ್ದಾರೆ. ಕುಟುಂಬವು ಈ ಕುರಿತು ಕವಿತಾಳ ನೀರಾವರಿ ಇಲಾಖೆ, ಮಸ್ಕಿ ತಹಸೀಲ್ದಾರ ಕಚೇರಿ, ಲಿಂಗಸುಗೂರು ಸಹಾಯಕ ಆಯುಕ್ತರ ಕಚೇರಿ, ಜಿಲ್ಲಾಧಿಕಾರಿಗಳಿಗೆ ಹಲವು ವರ್ಷಗಳಿಂದ ಮನವಿ ಸಲ್ಲಿಸುತ್ತಾ ಬಂದಿದ್ದರೂ ಯಾವುದೇ ಶಾಶ್ವತ ಪರಿಹಾರ ದೊರೆತಿಲ್ಲ ಎಂದು ಆರೋಪಿಸಿದೆ. ಕಳೆದ ತಿಂಗಳು ಮತ್ತೊಮ್ಮೆ ತಹಸೀಲ್ದಾರ್, ಸಹಾಯಕ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿ, ಸಮಸ್ಯೆ ಬಗೆಹರಿಸದಿದ್ದರೆ ಜುಲೈ 15ರಂದು ತಮ್ಮ ಜಮೀನಿನ ಮೂಲಕ ಹಾದುಹೋಗುವ ಹಾಲಾಪುರ ಎನ್.ಎನ್ ಕ್ಯಾಂಪ್ ಸರ್ಕಾರಿ ರಸ್ತೆ ಹಾಗೂ ಕಾಲುವೆಯನ್ನು ಬಂದ್ ಮಾಡಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಲಾಗಿತ್ತು.

ಈ ಹಿನ್ನೆಲೆಯಲ್ಲಿ 2026 ಜೂನ್ 29 ರಂದು ಜಿಲ್ಲಾಧಿಕಾರಿಗಳು ಮಸ್ಕಿ ತಹಸೀಲ್ದಾರ್ ಹಾಗೂ ಸಹಾಯಕ ಆಯುಕ್ತರಿಗೆ ಸಮಸ್ಯೆಯನ್ನು ಶೀಘ್ರದಲ್ಲಿ ಬಗೆಹರಿಸುವಂತೆ ಆದೇಶ ನೀಡಿದ್ದರು. ಆದರೆ ಜಿಲ್ಲಾಧಿಕಾರಿಗಳ ಆದೇಶಕ್ಕೂ ಅಧಿಕಾರಿಗಳು ಸ್ಪಂದಿಸಿಲ್ಲ ಎಂದು ಕುಟುಂಬ ಗಂಭೀರ ಆರೋಪ ಮಾಡಿದೆ. ತಾಲೂಕು ಮತ್ತು ಜಿಲ್ಲಾಡಳಿತಕ್ಕೆ ಜುಲೈ 19ರವರೆಗೆ ಕೊನೆಯ ಅವಕಾಶ ನೀಡುತ್ತಿದ್ದೇವೆ. ಅಷ್ಟರೊಳಗೆ ಸಮಸ್ಯೆ ಬಗೆಹರಿಸದಿದ್ದರೆ ರಸ್ತೆ ಮತ್ತು ಕಾಲುವೆ ಬಂದ್ ಸೇರಿದಂತೆ ಉಗ್ರ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಕುಟುಂಬ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಹದಿನೈದು ವರ್ಷಗಳಿಂದ ನ್ಯಾಯಕ್ಕಾಗಿ ಕಚೇರಿಗಳ ಸುತ್ತ ಅಲೆದಾಡುತ್ತಿರುವ ಈ ರೈತ ಕುಟುಂಬದ ಸಮಸ್ಯೆಗೆ ಈಗಲಾದರೂ ಸಂಬಂಧಪಟ್ಟ ಇಲಾಖೆಗಳು ಸ್ಪಂದಿಸುತ್ತವೆಯೇ? ಅಥವಾ ಅಧಿಕಾ–ರಿಗಳ ನಿರ್ಲಕ್ಷ್ಯ ಮುಂದುವರೆಯುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಸರ್ವೆ ನಂಬರ್ 96 ರ ಜಮೀನಿನ ಸುತ್ತಮುತ್ತಲಿರುವ ಎಲ್ಲಾ ಸಂಬಂಧಿಸಿದ ರೈತ–ರಿಗೆ ನೋಟಿಸ್ ನೀಡಿ, ಪರಿಶೀಲನೆ ನಡೆಸಿದ ನಂತರ ಸೂಕ್ತ ಕ್ರಮ ಜರುಗಿಸಲಾಗುವುದು.

–:ಡಾ.ಮಂಜುನಾಥ ಭೋಗಾವತಿ
ತಹಶೀಲ್ದಾರರು ಮಸ್ಕಿ

# ನೂತನ ಜಿಲ್ಲಾ ಆರೋಗ್ಯಾಧಿಕಾರಿಯಾಗಿ ಡಾ.ನಂದಿತಾ ಎಮ್.ಎನ್. ಅಧಿಕಾರ ಸ್ವೀಕಾರ

ೞ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜುಲೈ 17 (ಕರ್ನಾಟಕ ವಾರ್ತೆ): ಜಿಲ್ಲೆಯ ನೂತನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ (ಡಿಎಚ್‌ಒ)ಯಾಗಿ ಡಾ.ನಂದಿತಾ ಎಮ್.ಎನ್. ಅವರು ಜುಲೈ 17ರ ಶುಕ್ರವಾರ ದಂದು ಅಧಿಕಾರ ಸ್ವೀಕರಿಸಿದರು.**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ನಿರ್ಗಮಿತ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸುರೇಂದ್ರ ಬಾಬು ಅವರಿಂದ ಅಧಿಕಾರವನ್ನು ಅಧಿಕೃತವಾಗಿ ಸ್ವೀಕರಿಸಿ, ನಂತರ ಡಾ.ನಂದಿತಾ ಎಮ್. ಎನ್. ಅವರು ಮಾತನಾಡಿ, ಜಿಲ್ಲೆಯ ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಮತ್ತಷ್ಟು ಬಲಪಡಿಸಲು ಹಾಗೂ ಸರ್ಕಾರದ




ವಿವಿಧ ಆರೋಗ್ಯ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆದ್ಯತೆ ನೀಡುವುದಾಗಿ ತಿಳಿಸಿದರು. ತಾಯಿ ಮತ್ತು ಶಿಶು ಆರೋಗ್ಯ, ಕ್ಷಯರೋಗ ನಿರ್ಮೂಲನೆ, ಸಾಂಕ್ರಾಮಿಕ ರೋಗಗಳ ನಿಯಂತ್ರಣ, ಲಸಿಕಾ ಕಾರ್ಯಕ್ರಮ, ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವೆಗಳ ವಿಸ್ತರಣೆ ಸೇರಿದಂತೆ ಇಲಾಖೆಯ ಎಲ್ಲ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಜಾ–ರಿಗೊಳಿಸಲು ಅಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸಲಾಗುವುದು ಎಂದು ಹೇಳಿದರು. ಈ ವೇಳೆ ಇಲಾಖೆಯ ವಿವಿಧ ವಿಭಾಗದ ಮುಖ್ಯಸ್ಥರು, ವೈದ್ಯರು, ಸಿಬ್ಬಂದಿಗಳು ನೂತನ ಡಿಎಚ್‌ಒ ಅವರನ್ನು ಅಭಿನಂದಿಸಿ, ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಇಲಾಖೆಯ ವಿವಿಧ ವಿಭಾಗಗಳ ಅಧಿಕಾ–ರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಸೋನಮ್ ವಾಂಗ್ಚುಕ್ ನಿರಶನ ಬೆಂಬಲಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಧರಣಿ ಸತ್ಯಾಗ್ರಹ

ೞ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನೀಟ್ ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆ ಅಕ್ರಮ ಖಂಡಿಸಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ, ಪರಿಸರ, ಮಾನವ ಹಕ್ಕುಗಳ ಹೋರಾಟಗಾರ ಸೋನಮ್ ವಾಂಗ್ಚುಕ್ ಹಾಗೂ ವಿದ್ಯಾರ್ಥಿಗಳ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಬೆಂಬಲಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ನಗರದ ತಹಸಿಲ್ ಕಚೇರಿಯ ಮುಂದೆ ಶುಕ್ರವಾರ ಧರಣಿ ಸತ್ಯಾಗ್ರಹ ನಡೆಸಿ,**

ಶಿರಸ್ತೆದಾರ್ ಅಂಬಾದಾಸ್ ಅವರ ಮೂಲಕ ವಿವಿಧ ಹಕ್ಕೊತ್ತಾಯಗಳ ಮನವಿ ಪತ್ರವನ್ನು ರಾಷ್ಟ್ರಪತಿಗಳಿಗೆ ಶುಕ್ರವಾರ ಸಲ್ಲಿಸಲಾಯಿತು. ಕಳೆದ 19 ದಿನಗಳಿಂದ ಸೋನಮ್ ವಾಂಗ್‌ಚುಕ್ ಮತ್ತು ಉಪವಾಸ ನಿರತ ಇತರ ಪ್ರತಿಭಟನಾಕಾರರ ಆರೋಗ್ಯ ದಿನದಿಂದ ದಿನಕ್ಕೆ ಗಣನೀಯವಾಗಿ ಹದಗೆಡುತ್ತಿದ್ದರೂ ಕೇಂದ್ರ ಸರ್ಕಾರದ ಯಾವೊಬ್ಬ ಪ್ರತಿನಿಧಿಯೂ ಸತ್ಯಾಗ್ರಹಿಗಳ ಬೇಡಿಕೆಗಳನ್ನು ಆಲಿಸದೇ ಇರುವುದು ಗಮನಿಸಿದರೆ ಫ್ಯಾಸಿಸ್ಟ್ ಸರ್ಕಾರದ ಜೀವ ವಿರೋಧಿ ನೀತಿಗೆ ಸ್ಪಷ್ಟ ಸಾಕ್ಷಿಯಾಗಿದೆ. ಪ್ರಜಾಪ್ರಭುತ್ವದ ಹಕ್ಕುಗಳನ್ನು ಚಲಾಯಿಸುವ ನಾಗ–ರಿಕರಿಗೆ ಯಾವುದೇ ಬೆಲೆ ಇಲ್ಲದಂತಾಗಿದೆ ಎಂದು ಪ್ರತಿಭಟನಾನಿರತರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾನಿರತರನ್ನು ಉದ್ದೇಶಿಸಿ ಮಾತನಾಡಿದ ಒಕ್ಕೂಟದ ಸಂಚಾಲಕ ಚಂದ್ರಶೇಖರ ಗೊರಬಾಳ, ನೀಟ್ ಪ್ರಶ್ನೆ ಪತ್ರಿಕೆ ಹಗರಣಕ್ಕೆ ಸಂಬಂಧಿಸಿದಂತೆ, ಸಿಬಿಐ ನಡೆಸಿದ ತನಿಖೆಯಲ್ಲಿ ಪ್ರಶ್ನೆ ಪತ್ರಿಕೆ ತಯಾರಿಸುವ ಮಂಡಳಿಯ ಮಹಾರಾಷ್ಟ್ರ ಮೂಲದ ಸದಸ್ಯನೇ ಪ್ರಶ್ನೆ ಪತ್ರಿಕೆಯನ್ನು ಖಾಸಗಿ ಕೋಚಿಂಗ್ ಸೆಂಟರ್‌ವೊಂದಕ್ಕೆ ಮಾರಾಟ ಮಾಡಿರುವುದು ಬಯಲಾಗಿದೆ. ಇಂತಹ ಹಲವು




ಪ್ರಕರಣಗಳು ನಡೆದಿವೆ. ನೀಟ್ ಪ್ರಶ್ನೆ ಪತ್ರಿಕೆ ಸೋ–ರಿಕೆಯಲ್ಲ ಇದೊಂದು ಹಗರಣ ಎನ್ನುವುದು ಸಾರ್ವಜನಿಕ ವಲಯದಲ್ಲಿ ಜಗಜ್ಜಾಹೀರಾಗಿದೆ.

ಪ್ರಾಮಾಣಿಕವಾಗಿ ಅಭ್ಯಾಸ ಮಾಡಿದ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳು ಇದ–ರಿಂದ ವಂಚನೆಗೊಳಗಾಗಿದ್ದಾರೆ. ಕೇಂದ್ರ ಸರ್ಕಾರ ಮತ್ತು ಶಿಕ್ಷಣ ಇಲಾಖೆಯ ಹೊಣೆಹೊತ್ತ ಸಚಿವರು ಈ ಬಗ್ಗೆ ಕಿಂಚಿತ್ತೂ ಮಾತನಾಡುತ್ತಿಲ್ಲ" ಎಂದು ಆಕ್ರೋಶ ವ್ಯಕ್ತಪಡಿಸಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಮುಖಂಡ ಬಸವಂತರಾಯಗೌಡ ಮಾತನಾಡಿ, "ಯುಪಿಎ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ, ದೇಶವನ್ನು ಅಧೋಗತಿಗೆ ದೂಡಿದೆ ಎಂದು ಆರೋಪಿಸಿ, ಅಣ್ಣಾ ಹಜಾರೆಯವರನ್ನು ಮುಂದಿಟ್ಟುಕೊಂಡು ದೊಡ್ಡ ಆಂದೋಲನ ಸೃಷ್ಟಿಮಾಡಿ 2013ರ ವೇಳೆ ಜನ–ರಿಗೆ ನೂರಾರು ಹುಸಿ ಭರವಸೆಗಳನ್ನು ನೀಡುವ ಮೂಲಕ ಅಧಿಕಾರಕ್ಕೆ ಬಂದ ಬಿಜೆಪಿ ತದನಂತರ ತಾನೂ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ತೊಡಗಿದೆ.

ರೈತರ ಆದಾಯವನ್ನು ದ್ವಿಗುಣ ಮಾಡುತ್ತೇನೆ ಎಂದು ಮೋದಿಯವರು ಹೇಳಿದ್ದರೂ, ಆದರೆ ವಾಸ್ತವದಲ್ಲಿ ಕೃಷಿಗೆ ಹಾಕಿದ ಬಂಡವಾಳ ವಾಪಸ್ ಬರುತ್ತಿಲ್ಲ. ಇದರಿಂದ ರೈತರು ವರ್ಷದಿಂದ ವರ್ಷಕ್ಕೆ ಆತ್ಮಹತ್ಯೆಯ ಹಾದಿ ಹಿಡಿದಿದ್ದಾರೆ. ಈ ಬಗ್ಗೆ ಪ್ರಧಾನಿಯರು ತುಟಿಪಿಟಕ್ಕೆನ್ನುತ್ತಿಲ್ಲ" ಎಂದು ಆಪಾದಿಸಿದರು. ಎಸ್‌ಐಒ ಜಿಲ್ಲಾ ಘಟಕದ ಅಧ್ಯಕ್ಷ ಡಾ.ವಸೀಮ್ ಮಾತನಾಡಿ, "ನೀಟ್ ಪರೀಕ್ಷಾ ಅಕ್ರಮ 22 ಲಕ್ಷ ವಿದ್ಯಾರ್ಥಿಗಳನ್ನು ಮಾನಸಿಕ ಖಿನ್ನತೆಗೆ ದೂಡಿದೆ. ಅಲ್ಲದೇ ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಕನಸನ್ನು ನುಚ್ಚುನೂರು ಮಾಡಿದೆ. ಇದೊಂದು ಬಹುದೊಡ್ಡ ಹಗರಣವಾಗಿದ್ದು,

ವಿದ್ಯಾರ್ಥಿಗಳ ಬೇಡಿಕೆಗಳು ಇಟ್ಟುಕೊಂಡು ಮಾನವ ಹಕ್ಕುಗಳ ಹೋರಾಟಗಾರ ಸೋನಮ್ ವಾಂಗ್ಚುಕ್ ಮತ್ತು ವಿದ್ಯಾರ್ಥಿಗಳು ಕಳೆದ 19 ದಿನಗಳಿಂದ ಉಪವಾಸ ಸತ್ಯಾಗ್ರಹ ಆರಂಭಿಸಿದ್ದು, ಕನಿಷ್ಠ ಸೌಜನ್ಯಕ್ಕಾದರೂ ಕೇಂದ್ರ ಸರ್ಕಾರ ಅವರ ಅಹವಾಲನ್ನು ಆಲಿಸಿಲ್ಲ. ಪುನಃ ಅವರ ಹೋರಾಟವನ್ನು ಹೇಗಾದರೂ ಮಾಡಿ ಹತ್ತಿಕ್ಕಲು ನೋಡುತ್ತಿರುವುದು ಸರಿಯಲ್ಲ ಎಂದರು. ಸಮುದಾಯದ ಮುಖಂಡ ಎಸ್. ದೇವೇಂದ್ರಗೌಡ ಮಾತನಾಡಿ, ನೀಟ್ ಪ್ರಶ್ನೆ ಪತ್ರಿಕಾ ಮಂಡಳಿಯ ಸದಸ್ಯರೇ ಅಕ್ರಮದಲ್ಲಿ ಭಾಗಿಯಾಗಿರುವುದು ತನಿಖೆಯಲ್ಲಿ ಬಯಲಾಗಿದ್ದು, ಬೇಲಿಯೇ ಎದ್ದು ಹೊಲ ಮೇದಂತಾಗಿದೆ.

ಇದರ ಹಿಂದೆ ಖಾಸಗಿ ಶಿಕ್ಷಣ ಸಂಸ್ಥೆಗಳ ಲಾಭಿ ಮತ್ತು ಕೇಂದ್ರ ಸರ್ಕಾರದ ಕೆಲ ಕಾಣದ ಕೈಗಳ ಹುನ್ನಾರ ಅಡಗಿದೆ. ದೇಶದ ಶಿಕ್ಷಣ ವ್ಯವಸ್ಥೆ ಅಧೋಗತಿಗೀಡಾಗಿದ್ದು, ಸಂಪೂರ್ಣ ಖಾಸಗೀಮಯವಾಗುತ್ತಿದೆ. ಇದರ ನೈತಿ–ಕ ಹೊಣೆ ಹೊರಬೇಕಾದ ಕೇಂದ್ರ ಸರ್ಕಾರ ನುಣುಚಿಕೊಳ್ಳುತ್ತಿದೆ" ಎಂದು ಆರೋಪಿಸಿದರು. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಮುಖಂಡ ಅಮೀನ್‌ಪಾಷಾ ದಿದ್ದಿಗಿ ಮಾತನಾಡಿ, ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಕಣ್ಣು, ಕಿವಿ, ಮೂಗು, ಬಾಯಿ ಇಲ್ಲ; ಪ್ರಜ್ಞಾಶೂನ್ಯವಾಗಿದೆ. ನೀಟ್ ಅಕ್ರಮ ಖಂಡಿಸಿ, ವಿದ್ಯಾರ್ಥಿಗಳ ಸಲುವಾಗಿ ಸೋನಮ್ ವಾಂಗ್ಚುಕ್ ಹಾಗೂ ಪ್ರಜಾಸತ್ತಾತ್ಮಕ ಸಂಘಟನೆಯ ವಿದ್ಯಾರ್ಥಿಗಳು ಉಪವಾಸ ಕುಳಿತರೆ ಪ್ರಧಾನಿ ಮೋದಿಯವರು ದೇಶ ದೇಶ ಸುತ್ತುತ್ತಿದ್ದಾರೆ. ಗಾಂಧೀಜಿಯವರು ಉಪವಾಸ ಕುಳಿತರೆ ಬ್ರಿಟಿಷ್ ಅಧಿಕಾರಿಗಳೇ ಅವರು ಇರುವಲ್ಲಿಗೆ ಬಂದಿದ್ದರು.

ಆದರೆ ಪ್ರಸ್ತುತ ಬಿಜೆಪಿ ಸರ್ಕಾರದಲ್ಲಿನ ಸಚಿವರ, ಅಧಿಕಾರಿಗಳ ದರ್ಪ, ದೌರ್ಜನ್ಯ ನೋಡಿದರೆ, ಈ ದೇಶದ ಜನರ ಬಗ್ಗೆ ಅವ–ರಿಗೆ ಕಿಂಚಿತ್ತೂ ಕಾಳಜಿ ಇಲ್ಲ ಎಂಬುದು ಅಥ–ರ್ವಾಗುತ್ತದೆ" ಎಂದು ವಾಗ್ದಾಳಿ ನಡೆಸಿದರು. ಸಿಪಿಐ ಮುಖಂಡ ಭಾಷುಮಿಯಾ ಮಾತನಾಡಿ, "ಮೂರನೇ ಅವಧಿಗೆ ಕೇಂದ್ರದಲ್ಲಿ ಅಧಿಕಾರ ಹಿಡಿದಿರುವ ಬಿಜೆಪಿ ಸರ್ಕಾರ ಜನಸಾಮಾನ್ಯರ ಮೇಲೆ, ದುಡಿಯುವ ಜನರ ಮೇಲೆ ಹಾಗೂ ವಿದ್ಯಾರ್ಥಿ ಯುವಜನರ ಮೇಲೆ ದಾಳಿ ನಡೆಸುತ್ತಿದೆ. ಜನ ವಿರೋಧಿ, ಕಾರ್ಮಿಕ ವಿರೋಧಿ ನೀತಿಗಳು ಇಡೀ ದೇಶವನ್ನು ಆರ್ಥಿಕ ಸಂಕಷ್ಟಕ್ಕೆ ಗುರಿಮಾಡಿದ್ದು, ಜನರು ಅಗತ್ಯವಸ್ತುಗಳನ್ನು ಕೊಳ್ಳಲು ಪರದಾಡುತ್ತಿದ್ದಾರೆ.

ಈ ಫ್ಯಾಸಿಸ್ಟ್ ಸರ್ಕಾರವನ್ನು ಬೃಹತ್ ಜನಾಂದೋಲನದ ಮೂಲಕವೇ ಹಿಮ್ಮೆಟ್ಟಿಸಲು ಸಾಧ್ಯ ಎಂದು ಹೇಳಿದರು. ಉಪನ್ಯಾಸಕ ಶಂಕರ ಗುರಿಕಾರ, ಡಿಎಸ್‌ಎಸ್ ಮೂರ್ತಿ ಬಣದ ಜಿಲ್ಲಾಧ್ಯಕ್ಷ ಅಶೋಕ ನಂಜಲದಿನ್ನಿ, ಕೃಷ್ಣಮೂರ್ತಿ ಧುಮತಿ, ರೈತ ಮುಖಂಡ ಬಸವರಾಜ ಗೋಡಿಹಾಳ, ಸಮ್ಮದ್ ಚೌದ್ರಿ, ಎನ್ನರ?ಬಿಸಿ ಹೋರಾಟಗಾರ ನಾಗರಡ್ಡೆಪ್ಪ ದೇವರಮನಿ, ಅವರು ಕೇಂದ್ರ ಸರ್ಕಾರದ ಆಡಳಿತ ವೈಫಲ್ಯವನ್ನು ಖಂಡಿಸಿದರು.

ಪ್ರತಿಭಟನಾ ಧರಣಿಯಲ್ಲಿ ಜಮಾಅತೆ ಇಸ್ಲಾಂ ಹಿಂದ್‌ನ ಹುಸೇನ್‌ಸಾಬ್, ವೆಂಕನಗೌಡ ಗದ್ರಟಗಿ, ಕಂಟೆಪ್ಪ, ಡಿ.ಎಚ್.ಕಂಬಳಿ, ನಾಗರಾಜ್ ಪೂಜಾರ್, ಚಿಟ್ಟಿಬಾಬು ಬೂದಿವಾಳಕ್ಯಾಂಪ್, ಬಸವರಾಜ ಬಾದರ್ಲಿ, ಗಂಗಮ್ಮ ಗೊರಬಾಳ, ಸರಸ್ವತಿ ಪಾಟೀಲ್, ಶಕುಂತಲಾ ಪಾಟೀಲ್, ಹನುಮೇಶ ಗುಡದೂರು, ಬಸವರಾಜ ಕೊಂಡೆ, ಬಸವರಾಜ ಹಸಮಕಲ್, ಡಾ.ಬಸವರಾಜ ನಾಯಕ, ವೀರೇಶ ಕನ್ನಾರಿ, ಕಟ್ಟಡ ಕಾರ್ಮಿಕರ ಸಂಘದ ಜಗದೀಶ್, ತುಳಸಪ್ಪ ದಡೇಸುಗೂರು, ಸಿಪಿಐ(ಎಂಎಲ್) ಲಿಬರೇಶನ ತಾಲ್ಲೂಕು ಕಾರ್ಯದರ್ಶಿ ಬಸವರಾಜ ಬೆಳಗುರ್ಕಿ, ಇಮ್ತಿಯಾಜ್, ಖಾಸಿಂ ಕಾರ್ಪೆಂಟರ್, ಅಬುಲೈಸ್ ನಾಯ್ಕ ಸೇರಿದಂತೆ ಇನ್ನಿತರರು ಇದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101